**ಕರ್ನಾಟಕ ವಿಧಾನ ಪರಿಷತ್ತು**

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | **1736** |
| **ಸದಸ್ಯರ ಹೆಸರು** | **ಶ್ರೀ ವೈ.ಎಂ.ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)** |
| **ಉತ್ತರಿಸಬೇಕಾದ ದಿನಾಂಕ** | **23-03-2026** |
| **ಉತ್ತರಿಸುವ ಸಚಿವರು** | **ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು** |

******

| **ಕ್ರ. ಸಂ** | **ಪ್ರಶ್ನೆಗಳು** | **ಉತ್ತರಗಳು** |
|---|---|---|
| ಅ) | ಆಯುಷ್ ಇಲಾಖೆಯಲ್ಲಿ ಔಷಧಿಗಳ ಖರೀದಿಯನ್ನು ಮಾಡಲು ಇರುವ ಕಾನೂನು ಮತ್ತು ಮಾನದಂಡಗಳೇನು; ಯಾವ ಆಧಾರದ ಮೇಲೆ ಯಾವ ಹುದ್ದೆಯ ಅಧಿಕಾರಿ, ಯಾವ ಆಧಾರದ ಮೇಲೆ ಔಷಧಿಗಳನ್ನು ಖರೀದಿ ಮಾಡುವರು; ಅವುಗಳ ಸರ್ಕಾರಿ ಆದೇಶದ ಪ್ರತಿಗಳೊಂದಿಗೆ ಮಾಹಿತಿ ಒದಗಿಸುವುದು; | ಆಯುಷ್ ಇಲಾಖೆಯಲ್ಲಿ ಔಷಧಗಳನ್ನು ಖರೀದಿ ಮಾಡಲು ಆಯಾ ಆರ್ಥಿಕ ವರ್ಷದಲ್ಲಿ ರಾಜ್ಯ ವಲಯದಡಿ, ಜಿಲ್ಲಾ ಪಂಚಾಯತ್ ಅಡಿ ಹಾಗೂ ನ್ಯಾಮ್ ಯೋಜನೆಯಡಿ ಬಿಡುಗಡೆ ಮಾಡಲಾಗುವ ಅನುದಾನದಲ್ಲಿ ದರಪಟ್ಟಿಯ ಹಾಗೂ ಇ-ಪ್ರೊಕ್ಯೂರಮೆಂಟ್ ಮುಖಾಂತರ KTPP ನಿಯಮಗಳನ್ನು ಅನುಸರಿಸಿ ಪಾರದರ್ಶಕವಾಗಿ ಖರೀದಿ ಮಾಡಲಾಗುತ್ತಿದೆ.<br><br>ಮುಂದುವರೆದು, ಸರ್ಕಾರದ ಆದೇಶದ ಸಂಖ್ಯೆ:50/ಆಇ08/ಟಿಎಫ್‌ಪಿ/ 2023 ದಿನಾಂಕ: 28-10-2024 ರಲ್ಲಿ ಪ್ರದತ್ತವಾದ ವಿತ್ತಾಧಿಕಾರದನ್ವಯ ಇಲಾಖಾ ಮುಖ್ಯಸ್ಥರಿಗೆ, ವಿಭಾಗೀಯ ಮಟ್ಟದ ಅಧಿಕಾರಿಗಳಾದ ಪ್ರಾಚಾರ್ಯರುಗಳಿಗೆ, ಜಿಲ್ಲಾ ಮಟ್ಟದ ಅಧಿಕಾರಿಗಳಾದ ಜಿಲ್ಲಾ ಆಯುಷ್ ಅಧಿಕಾರಿಗಳಿಗೆ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳಾದ ಹಿರಿಯ ವೈದ್ಯಾಧಿಕಾರಿಗಳಿಗೆ, ಮತ್ತು ವೈದ್ಯಾರಿಗಳಿಗೆ KTPP ನಿಯಮಗಳನ್ವಯ ರಚಿಸಲಾದ ಟೆಂಡರ್‌ನ ವಿವಿಧ ಸಮಿತಿಗಳ ಮೂಲಕ ಔಷಧಗಳನ್ನು ಖರೀದಿ ಮಾಡಲು ಅವಕಾಶವನ್ನು ಕಲ್ಪಿಸಲಾಗಿದೆ (**ಅನುಬಂಧ-1**). |
| ಆ) | ಆಯುಷ್ ಇಲಾಖೆಯ ಔಷಧಿಗಳ ಖರೀದಿಯಲ್ಲಿ ಗುಣಮಟ್ಟವಿಲ್ಲದ ಮತ್ತು ಭ್ರಷ್ಟಾಚಾರ ಮಾಡಿ ಕಡಿಮೆ ಗುಣಮಟ್ಟದ ಔಷಧಿಯನ್ನು ಖರೀದಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದ್ದಲ್ಲಿ ಇಂತಹ ಅಧಿಕಾರಿಗಳ ಮೇಲೆ ಸರ್ಕಾರದ ಕ್ರಮಗಳೇನು; ಇಲ್ಲಿಯವರೆಗೆ ತೆಗೆದುಕೊಂಡ ಕ್ರಮಗಳ ಆದೇಶ ಪ್ರತಿಗಳು ಹಾಗೂ ಅಧಿಕಾರಿಗಳ ವಿವರಗಳೊಂದಿಗೆ ಪೂರ್ಣ ಮಾಹಿತಿ ಒದಗಿಸುವುದು; | 1) ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳ ಆಯುಷ್ ಆಸ್ಪತ್ರೆ /ಚಿಕಿತ್ಸಾಲಯಗಳಿಗೆ ಔಷಧಿ ಮತ್ತು ಉಪಕರಣಗಳ ಖರೀದಿಗೆ ಸಂಬಂಧಿಸಿದಂತೆ ಅಕ್ರಮ, ಭ್ರಷ್ಟಾಚಾರ ಹಾಗೂ ಕರ್ತವ್ಯ ಲೋಪದ ಆರೋಪಗಳ ಕುರಿತಂತೆ ಸರ್ಕಾರದ ಆದೇಶದ ಸಂಖ್ಯೆ:ಆಕುಕ 187 ಪಿಐಎಂ 2025, ದಿನಾಂಕ:08-05-2025 ರಲ್ಲಿ(**ಅನುಬಂಧ-2**) ಈ ಕೆಳಕಂಡ ಅಧಿಕಾರಿ/ಸಿಬ್ಬಂದಿಗಳ ವಿರುದ್ಧ ಇಲಾಖಾ ವಿಚಾರಣೆಯನ್ನು ಬಾಕಿಯಿರಿಸಿ ತಕ್ಷಣದಿಂದ ಜಾರಿಗೆ ಬರುವಂತೆ ಸೇವೆಯಿಂದ ಅಮಾನತ್ತು ಮಾಡಿ ಆದೇಶಿಸಿದೆ.<br><br>1. ಡಾ. ಸರಳಾದೇವಿ, ಜಿಲ್ಲಾ ಆಯುಷ್ ಅಧಿಕಾರಿ, ಬಳ್ಳಾರಿ ಮತ್ತು ಪ್ರಭಾರಿ ಜಿಲ್ಲಾ ಆಯುಷ್ ಅಧಿಕಾರಿ, ವಿಜಯನಗರ ಜಿಲ್ಲೆ |

| | |
|---|---|
| | 2. ಶ್ರೀ ಶರಣಪ್ಪ ಜಿನಗಾ, ಸಹಾಯಕ ಆಡಳಿತಾಧಿಕಾರಿ, ಜಿಲ್ಲಾ ಆಯುಷ್ ಕಛೇರಿ ಬಳ್ಳಾರಿ<br>3. ಶ್ರೀ ಖಲಂದರ್ ಕಛೇರಿ ಅಧೀಕ್ಷಕರು, ಜಿಲ್ಲಾ ಆಯುಷ್ ಕಛೇರಿ ಬಳ್ಳಾರಿ,<br><br>ಸದರಿ ಪ್ರಕರಣವನ್ನು ಸರ್ಕಾರದ ಆದೇಶ ಸಂಖ್ಯೆ: ಆಕುಕ 187 ಪಿಐಎಂ 2025, ದಿನಾಂಕ: 08-05-2025 ರಲ್ಲಿ, ಕರ್ನಾಟಕ ಲೋಕಾಯುಕ್ತ ಕಾಯದೆ 1984 ಕಲಂ-7 (2)(ಎ) ರನ್ವಯ, ಲೋಕಾಯುಕ್ತಕ್ಕೆ ವಹಿಸಿ ಆದೇಶಿಸಿದೆ. **(ಅನುಬಂಧ-3)**<br><br>2) ಗದಗ ಜಿಲ್ಲೆಯ ಜಿಲ್ಲಾ ಆಯುಷ್ ಕಛೇರಿಯಲ್ಲಿ, ಔಷಧಿ ಮತ್ತು ಸಾಧನೋಪಕರಣಗಳ ಖರೀದಿಯ ಬಗ್ಗೆ, ಸರಬರಾಜು ಮಾಡಿರುವ ಕಂಪನಿಗಳೊಂದಿಗೆ ಕಮಿಷನ್ ಹಣಕ್ಕೆ ಬೇಡಿಕೆ ಇಟ್ಟಿರುವ ವಿಷಯಕ್ಕೆ ಸಂಬಂಧಿಸಿದಂತೆ ಅಕ್ರಮ, ಭ್ರಷ್ಟಾಚಾರ ಹಾಗೂ ಕರ್ತವ್ಯ ಲೋಪದ ಆರೋಪಗಳ ಕುರಿತಂತೆ, ಸರ್ಕಾರದ ಆದೇಶ ಸಂಖ್ಯೆ:ಆಕುಕ 477 ಪಿಐಎಂ 2025, ದಿನಾಂಕ: 29-01-2026 ರಲ್ಲಿ **(ಅನುಬಂಧ-4)** ಡಾ. ಜಯಪಾಲ್ ಸಿಂಗ್, ಜಿಲ್ಲಾ ಆಯುಷ್ ಅಧಿಕಾರಿಗಳು ಗದಗ ಜಿಲ್ಲೆ, ಶ್ರೀ ಕಲ್ಮೇಶ ಸ್ವಾಮಿ, ಕಛೇರಿ ಅಧೀಕ್ಷಕರು, ಜಿಲ್ಲಾ ಆಯುಷ್ ಕಛೇರಿ ಗದಗ, ಶ್ರೀ ಕಿರಣ ಕುಮಾರ ಬಿ. ದ್ವಿ.ದ.ಸ, ಜಿಲ್ಲಾ ಆಯುಷ್ ಕಛೇರಿ ಗದಗ. ಇವರುಗಳನ್ನು ಸೇವೆಯಿಂದ ಅಮಾನತ್ತು ಮಾಡಲಾಗಿದ್ದು, ಸದರಿ ಪ್ರಕರಣವನ್ನು ಕರ್ನಾಟಕ ಲೋಕಾಯುಕ್ತ ಕಾಯ್ದೆ-1984ರ ಕಲಂ 7(2)(ಎ) ರನ್ವಯ ಮಾನ್ಯ ಲೋಕಾಯುಕ್ತರ ತನಿಖೆಗೆ ವಹಿಸಿ ಆದೇಶಿಸಿದೆ. **(ಅನುಬಂಧ-5)** |
| ಇ) ರಾಜ್ಯದಲ್ಲಿ ಆಯುಷ್ ಇಲಾಖೆಗೆ ನೀಡಲಾಗುತ್ತಿರುವ ಅನುದಾನಕ್ಕಿಂತ ತುಂಬಾ ಕಡಿಮೆ ಮಟ್ಟದಲ್ಲಿ ಕೆಲಸ / ಕಾರ್ಯಗಳು ಆಗುತ್ತಿದ್ದು, ಜಿಲ್ಲಾಮಟ್ಟದ ಅಧಿಕಾರಿಗಳ ನಡುವೆ ದಕ್ಷತೆ ಇಲ್ಲದೆ ರಾಜ್ಯಮಟ್ಟದ ಅಧಿಕಾರಿಗಳ ಹೊಂದಾಣಿಕೆಯಿಂದ ಆಯುಷ್ ಇಲಾಖೆ ನಡೆಯುತ್ತಿದ್ದು ಇದನ್ನು ಸರಿಪಡಿಸಲು ಇಲಾಖೆಯ ಭ್ರಷ್ಟ ಅಧಿಕಾರಿ ವರ್ಗದವರ ಮೇಲೆ ಕಠಿಣ ಕಾನೂನು ಕ್ರಮ ಕೈಗೊಳ್ಳಲು ಮತ್ತು ಅನುದಾನದ ದಕ್ಷ ಬಳಕೆ ಮಾಡಲು ಸರ್ಕಾರದ ಕ್ರಮಗಳೇನು? | ಉಪ ಪ್ರಶ್ನೆ (ಅ) ರಲ್ಲಿ ಈಗಾಗಲೇ ವಿವರಿಸಿರುವಂತೆ ಆಯುಷ್ ಇಲಾಖೆಯಲ್ಲಿ ಭ್ರಷ್ಟಾಚಾರ, ಅಕ್ರಮಗಳಿಗೆ ಸಂಬಂಧಪಟ್ಟಂತೆ ದೂರುಗಳು ಸ್ವೀಕೃತವಾದ ಕೂಡಲೇ ಕರ್ನಾಟಕ ರಾಜ್ಯ ನಾಗರೀಕ ಸೇವಾ (ನಡತೆ) ನಿಯಮಗಳು 2021 ಹಾಗೂ ಕರ್ನಾಟಕ ಸಿವಿಲ್ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲ್) 1957 ನಿಯಮಾವಳಿಗಳ ಪ್ರಕಾರ ಕ್ರಮ ವಹಿಸಲಾಗುತ್ತಿದೆ. |

ಸಂಖ್ಯೆ: ಆಕುಕ 73 ಪಿಟಿಡಿ 2026

**(ದಿನೇಶ್ ಗುಂಡೂರಾವ್)**

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

ಅನುಬಂಧ -1

GOVERNMENT OF KARNATAKA

# GENERAL DELEGATION OF COMMON FINANCIAL POWERS TO HEADS OF DEPARTMENTS AND OTHERS

FINANCE DEPARTMENT

# GENERAL DELEGATION OF COMMON FINANCIAL POWERS TO HEADS OF DEPARTMENTS AND OTHERS

FINANCE DEPARTMENT

**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:-** ಇಲಾಖಾ ಮುಖ್ಯಸ್ಥರು ಹಾಗೂ ಇನ್ನಿತರ ಅಧಿಕಾರಿಗಳಿಗೆ ಸಾಮಾನ್ಯ ವಿತ್ತಾಧಿಕಾರವನ್ನು ಪರಿಷ್ಕರಿಸುವ ಬಗ್ಗೆ.

**ಓದಲಾಗಿದೆ:-** 1. ಸರ್ಕಾರದ ಆದೇಶ ಸಂ.ಎಫ್‌ಡಿ 01 ಟಿಎಫ್‌ಪಿ 2001 ದಿ:02-02-2001.

2. ಸರ್ಕಾರದ ಆದೇಶ ಸಂ:ಎಫ್‌ಡಿ 02 ಟಿಎಫ್‌ಪಿ 2010, ದಿ:30.04.2010

3. ಸರ್ಕಾರದ ಆದೇಶ ಸಂ.ಎಫ್‌ಡಿ 03 ಟಿಎಫ್‌ಪಿ 2018 ದಿ: 14.05.2018.

*********

**ಪ್ರಸ್ತಾವನೆ:**

ಮೇಲೆ (3)ರ ಓದಲಾದ ಆದೇಶದಲ್ಲಿ ಇಲಾಖಾ ಮುಖ್ಯಸ್ಥರುಗಳು, ವಿಭಾಗೀಯ ಮಟ್ಟದ ಅಧಿಕಾರಿಗಳು, ಜಿಲ್ಲಾ ಮಟ್ಟದ ಅಧಿಕಾರಿಗಳು, ಉಪ ವಿಭಾಗೀಯ ಮಟ್ಟದ ಅಧಿಕಾರಿಗಳು ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ಸಾಮಾನ್ಯ ವಿತ್ತಾಧಿಕಾರವನ್ನು ಪರಿಷ್ಕರಿಸಲಾಗಿತ್ತು.

2. ಸಾಮಾನ್ಯ ಆರ್ಥಿಕ ಪ್ರತ್ಯಾಯೋಜನೆ ಆದೇಶ ಹೊರಡಿಸಿ ಸುಮಾರು ಆರು ವರ್ಷಗಳು ಆಗಿರುವುದರಿಂದ, ಆರ್ಥಿಕ ಪ್ರತ್ಯಾಯೋಜನೆಯ ಮಿತಿಗಳನ್ನು ಸೂಕ್ತವಾಗಿ ಪರಿಷ್ಕರಿಸುವ ಸಲುವಾಗಿ ಸರ್ಕಾರದ ವಿವಿಧ ಇಲಾಖೆಗಳಿಂದ ಆರ್ಥಿಕ ಅಧಿಕಾರ ಪರಿಷ್ಕರಣೆಗಾಗಿ ಸ್ವೀಕೃತವಾಗಿರುವ ಪ್ರಸ್ತಾವನೆಗಳನ್ನು ಪರಿಗಣಿಸಲಾಗಿದೆ.

3. ಸಾಮಾನ್ಯವಾಗಿ ಎಲ್ಲಾ ಇಲಾಖೆಗಳಿಗೂ ಅನ್ವಯವಾಗುವಂತೆ ಅಧಿಕಾರಗಳನ್ನು ವಿಂಗಡಿಸಿ ಈ ಆದೇಶದ ವ್ಯಾಪ್ತಿಯಲ್ಲಿ ತಂದಿದ್ದರೂ ಸಹ ಕೆಲವೊಂದು ಇಲಾಖೆಗಳ ಕಾರ್ಯನಿರ್ವಹಣೆ ವಿಭಿನ್ನವಾಗಿದ್ದು, ಅಧಿಕಾರಗಳ ವಿಧ, ಅಧಿಕಾರದ ಮಿತಿ ಬೇರೆಯಾಗಿರುತ್ತದೆ.

4. ಪ್ರಸ್ತಾವನೆಗಳನ್ನು ಕೂಲಂಕಷವಾಗಿ ಪರಿಶೀಲಿಸಿದ್ದು, ಪ್ರಸ್ತುತ ದಿನಗಳಲ್ಲಿ ಸರಕು ಸಾಮಗ್ರಿಗಳ ಬೆಲೆ ಹೆಚ್ಚಾಗಿರುವುದರಿಂದ ಹಾಗೂ ವಸ್ತುಗಳ ದರವು ದುಬಾರಿಯಾಗಿರುವುದರಿಂದ ಪ್ರಸ್ತುತವಿರುವ ಆರ್ಥಿಕ ಮಿತಿಯಲ್ಲಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಸಾಧ್ಯವಾಗದಿರುವುದನ್ನು ಸರ್ಕಾರವು ಮನಗಂಡು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಆಇ 08 ಟಿಎಫ್‌ಪಿ 2023, ಬೆಂಗಳೂರು,**

**ದಿನಾಂಕ: 28-10-2024**

1. ಕರ್ನಾಟಕ ಆರ್ಥಿಕ ಸಂಹಿತೆ ಅನುಚ್ಛೇದ-315 ರನ್ವಯ ಎಲ್ಲಾ ಇಲಾಖಾ ಮುಖ್ಯಸ್ಥರುಗಳು ಹಾಗೂ ಇನ್ನಿತರ ಇಲಾಖಾಧಿಕಾರಿಗಳಿಗೆ ಸರ್ಕಾರದ ಆದೇಶ ಸಂ.ಆಇ 03 ಟಿಎಫ್‌ಪಿ 2018, ಬೆಂಗಳೂರು,

ದಿನಾಂಕ 14-05-2018ರಲ್ಲಿ ನೀಡಲಾದ ಸಾಮಾನ್ಯ ಆರ್ಥಿಕ ಅಧಿಕಾರಗಳನ್ನು ಪರಿಷ್ಕರಿಸಿ ಈ ಆದೇಶಕ್ಕೆ ಲಗತ್ತಿಸಿದ ಅನುಬಂಧದಲ್ಲಿರುವಂತೆ ಪ್ರತ್ಯಾಯೋಜಿಸಿ ಆದೇಶಿಸಲಾಗಿದೆ.

2. ಈ ಆದೇಶದಲ್ಲಿ ಹೊರಡಿಸಿದ ಅಧಿಕಾರಗಳನ್ನು ಸರ್ಕಾರದ ಆದೇಶ ಸಂ: ಎಫ್‌ಡಿ 02 ಟಿಎಫ್‌ಪಿ 2015, ದಿ:20.01.2016 ಹಾಗೂ ತದನಂತರದ ಪರಿಷ್ಕೃತ/ಸೇರ್ಪಡೆ/ತಿದ್ದುಪಡಿ ಆದೇಶಗಳಲ್ಲಿ ಅಧಿಸೂಚಿಸಿದ ಅಧಿಕಾರಿಗಳು ಮಾತ್ರ ಚಲಾಯಿಸಬಹುದಾಗಿದೆ.

3. ಈ ಆದೇಶದ ಅನುಬಂಧದಲ್ಲಿ ಒಳಗೊಂಡಿರುವ ಕೆಲವು ಅಂಶಗಳ ಬಗ್ಗೆ ವಿಶೇಷ ಅಧಿಕಾರವನ್ನು ಇಲಾಖೆಗಳಿಗೆ ಪ್ರತ್ಯಾಯೋಜಿಸಿದ್ದಲ್ಲಿ, ಅಂತಹ ಇಲಾಖೆಗಳು ವಿಶೇಷ ಆರ್ಥಿಕ ಅಧಿಕಾರ ಅಥವಾ ಸಾಮಾನ್ಯ ಆರ್ಥಿಕ ಅದಿಕಾರ ಇವುಗಳಲ್ಲಿ ಯಾವುದಾದರೊಂದನ್ನು ಚಲಾಯಿಸಬೇಕಾಗುತ್ತದೆ. ಎರಡೂ ಅಧಿಕಾರಗಳನ್ನು ಚಲಾಯಿಸುವಂತಿಲ್ಲ.

4. ಆರ್ಥಿಕ ಅಧಿಕಾರ ಕೈಪಿಡಿ 1967ರ ಭಾಗ-3ರಲ್ಲಿನ ಅಧಿಕಾರಗಳನ್ನು ಹಾಗೂ ಓದಲಾದ (1) ರಿಂದ (3) ರವರೆಗಿನ ಎಲ್ಲಾ ಸಾಮಾನ್ಯ ಆರ್ಥಿಕ ಅಧಿಕಾರಗಳ ಪ್ರತ್ಯಾಯೋಜನೆ ಆದೇಶಗಳನ್ನು ಈ ಆದೇಶವು ಉತ್ಕ್ರಮಿಸುತ್ತದೆ (Supercede)

5. ಯಾವುದೇ ಪ್ರಾಧಿಕಾರಿಗಳು ಈ ಆದೇಶದಲ್ಲಿರುವ ಯಾವುದೇ ಅಧಿಕಾರವನ್ನು ಸಂಪೂರ್ಣವಾಗಿ ಅಥವಾ ಭಾಗಶಃ ಪುನರ್ ಪ್ರತ್ಯಾಯೋಜನೆ ಮಾಡತಕ್ಕದ್ದಲ್ಲ.

6. ಈ ಆದೇಶವು ಹೊರಡಿಸಿದ ದಿನಾಂಕದಿಂದ ಜಾರಿಗೆ ಬರುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

28.10.2024
(ಹೆಚ್.ಎ.ಶೋಭ)
ಸರ್ಕಾರದ ಜಂಟಿ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಆನಿ ಮತ್ತು ಬಿಸಿಸಿ)

ಇವರಿಗೆ:-

ನಿರ್ದೇಶಕರು, ಕರ್ನಾಟಕ ರಾಜ್ಯ ಪತ್ರ ಬೆಂಗಳೂರು ಇವರಿಗೆ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು ಕೋರಲಾಗಿದೆ.

ಪ್ರತಿಗಳು:-

1. ಮಹಾಲೇಖಪಾಲರು (ಎ ಮತ್ತು ಇ), ಪ್ರಧಾನ ಮಹಾಲೇಖಪಾಲರು (ಇಆರ್‌ಎಸ್‌ಎ), ಮತ್ತು ಮಹಾಲೇಖಪಾಲರು (ಜಿಎಸ್‌ಎಸ್‌ಎ), ಕರ್ನಾಟಕ, ಬೆಂಗಳೂರು-1.

2. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿ.
3. ಎಲ್ಲಾ ಇಲಾಖಾ ಮುಖ್ಯಸ್ಥರುಗಳು.
4. ಎಲ್ಲಾ ಜಿಲ್ಲಾಧಿಕಾರಿಗಳು.
5. ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.
6. ನಿರ್ದೇಶಕರು, ಖಜಾನೆ ಇಲಾಖೆ, ಪೋಡಿಯಂ ಬ್ಲಾಕ್, ಬೆಂಗಳೂರು.
7. ಎಲ್ಲಾ ಜಿಲ್ಲಾ ಖಜಾನಾಧಿಕಾರಿಗಳು.
8. ಸರ್ಕಾರದ ಉಪ ಕಾರ್ಯದರ್ಶಿಗಳು/ಸರ್ಕಾರದ ಅಧೀನ ಕಾರ್ಯದರ್ಶಿಗಳು ಶಾಖಾಧಿಕಾರಿಗಳು, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
9. ಹೆಚ್ಚುವರಿ ಪ್ರತಿಗಳು/ಶಾಖಾ ರಕ್ಷಾ ಕಡತ.

**Annexure to Government Order No: FD 08 TFP 2023 dated: 28 .10.2024**

| Sl. No | Description of power | Heads of Department | Divisional Level Officers | District Level Officers | Sub Division Level Officers | Taluk Level Officers | Sub Taluk Level Officers |
|---|---|---|---|---|---|---|---|
| 1(a) | Administrative approval of works & procurement of goods & services | Estimate of Rs.2.5 crore for one work subject to availability of grants | Estimate of Rs.1.00 crore for one work subject to availability of grants | Estimate of Rs.50.00 lakh for one work subject to availability of grants | Estimate of Rs.10.00 lakh for one work subject to availability of grants | Estimate of Rs.2.00 lakh for one work subject to availability of grants | -- |
| 1(b) | After original approval of works by the cabinet for one scheme, approval of individual works for implementing scheme.<br>(Ex: JJM, Amrut, SBM, Nagarotthana, Kaveri-2) | Estimate of Rs.5.00 crore for each work subject to availability of grants | Estimate of Rs.2.00 crore for each work subject to availability of grants | Estimate of Rs.1.00 crore for each work subject to availability of grants | Estimate of Rs.50.00 lakh for each work subject to availability of grants | Estimate of Rs.10.00 lakh for each work subject to availability of grants | -- |
| 2 | Books and periodicals for office use: - To sanction purchase of reference books and journals for facilitating official work (Rule 55(9) & 45 of MCE)<br>**For Large scale purchases Sl. No. 1(a) will apply.** | Full powers | Full powers | Rs.20,000 per annum | Rs.10,000 per annum | Rs.2,000 per annum | Rs.1,000 per annum |

| | | | | | | | |
|---|---|---|---|---|---|---|---|
| | **Procurement of books for libraries delegation of powers as per TOBR shall be followed.** | | | | | | |
| 3 | <u>Stationery</u><br>(Rule 55(48) of MCE) | Full powers | Full powers | Rs.50,000 each time and 5.00 lakh per annum | Rs.25,000 each time and Rs.2.50 lakh per annum | Rs.10,000 each time upto 1.00 lakh per annum | Rs.4,000 each time upto 40,000 per annum |
| 4 | <u>Office equipment</u> & Repairs (Rule 55(49) of MCE) photo copier (xerox) scanner) | Rs.40.00 lakh per annum | Rs.20.00 lakh per annum | Rs.10.00 lakh per annum | Rs.4.00 lakh per annum | Rs.2.00 lakh per annum | Rs.50,000 per annum |
| 5 | <u>Computers and peripherals/ Computer Accessories</u><br>(Any purchase above Rs.10 lakh needs to follow procedure prescribed by E-governance dept.) | Full powers | Rs.20.00 lakh per annum | Rs.10.00 lakh per annum | Rs.4.00 lakh per annum | Rs.2.00 lakh per annum | Rs.50,000 per annum |
| 6 | Purchase of Office Furniture (Rule 55(28) of MCE) For bulk procurement for the entire department as a part of the program, Sl. No. 1(a) & TOBR will apply as the case may be) | Full powers | Rs.20.00 lakh Per annum | Rs.8.00 lakh per annum | Rs.4.00 lakh per annum | Rs.2.00 lakh per annum | Rs.50,000 per annum |

| | | | | | | | |
|---|---|---|---|---|---|---|---|
| 7 | Laboratory equipment and<br><br>Consumables (specific consumables should be specified by consumed dept.) | Full powers | Rs.2.00 crore per annum | Rs.1.00 crore per annum | Rs.30.00 lakh per annum | Rs.2.00 lakh per annum | Rs.50,000 per annum |
| 8 | Drugs & medicines | Sl. No.1(a) or 1(b) shall be followed as the case may be | | | | | |
| 9 | Diet items (Rule 55(49) of MCE) | Sl. No.1(a) or 1(b) shall be followed as the case may be | | | | | |
| 10 | Tools and machinery (Rule 55(49) of MCE) | Sl. No.1(a) or 1(b) shall be followed as the case may be | | | | | |
| 11 | Items and implements used to implement government programmes/schemes (here concerned Department should specify the schemes/programmes see condition. No. 7) | Sl. No.1(a) or 1(b) shall be followed as the case may be | | | | | |
| 12 | Miscellaneous items for hospitals/hostels/ child homes/ Anganawadis/ schools/ ANM sub centers etc. (item specifically required by departments should be specified by concerned dept (See condition. No.7) (Rule 55(49) of MCE) | Sl.No.1(a) or 1(b) shall be followed as the case may be | | | | | |

| | | | | | | | |
|---|---|---|---|---|---|---|---|
| 13 | Repair & AMC of computer and related items | Full powers | Full powers | Rs.20.00 lakh per annum | Rs.10.00 lakh per annum | Rs.4.00 lakh per annum | Rs.1.00 lakh per annum |
| 14 | Repair and AMC of office equipment and furniture | Full powers | Full powers | Rs.20.00 lakh per annum | Rs.10.00 lakh per annum | Rs.4.00 lakh per annum | Rs.1.00 lakh per annum |
| 15 | Repair of vehicles<br>(Rule 55(40) (A) of MCE) | Full powers | Upto Rs. 2.00 lakh on one vehicle, subject to Rs.14.00 lakh per annum | Upto Rs. 1.00 lakh on one vehicle, subject to Rs.10.00 lakh per annum | Up to Rs. 1.00 lakh on one vehicle, subject to Rs.6.00 lakh per annum | Up to Rs.40,000 on one vehicle, subject to Rs.2.00 lakh per annum | Up to Rs.20,000 on one vehicle, subject to Rs.1.00 lakh per annum |
| 16 | Repair and AMC of machinery and laboratory/hospital equipment | Full powers | Full powers | Rs.50.00 lakh per annum | Rs.20.00 lakh per annum | Rs.8.00 lakh per annum | Rs.1.00 lakh per annum |
| 17 | **To sanction write off of the following vide article 306 of KFC.**<br>(Subject to quarterly statement of such writes off being submitted to Government in the case of Heads of Departments and to Heads of Departments in other cases for review)<br>i)Values of stores or Government money lost other than by fraud or negligence of individual | Rs.40,000 in individual case, subject to Rs.20.00lakh per annum | Rs.20,000 in individual case subject to Rs.8.00 lakh per annum | Rs.8,000 in individual case subject to Rs.2.00 lakh per annum | -- | -- | -- |

| | | | | | | | |
|---|---|---|---|---|---|---|---|
| | Government servants<br><br>(In all such cases, the authorised officer shall record that the loss has not been caused because of fraud or negligence)<br><br>ii)Irrecoverable items of departmental revenues<br>iii) Irrecoverable amounts of loans and advances | | | | | | |
| 18 | <u>To declare stores as obsolete, surplus or unserviceable and dispose them</u> subject to fixing responsibility for the loss where they have become obsolete, surplus or unserviceable owing to negligence or fraud etc., on the part of individual Govt. servants (vide Article 168 of KFC)<br><br>(Before Disposal certificate by the competent authority in this regard is essential) | | | | | | |

| | | | | | | | |
|---|---|---|---|---|---|---|---|
| | i) Unusable goods like Sports materials/ Toys/educational equipments etc. | Full powers | Rs.1.00 lakh in one case subject to Rs.10.00 lakh per annum | Rs.60,000 in one case, subject to Rs.6.00 lakh per annum | Rs.30,000 in one case, subject to Rs.2.00 lakh per annum | Rs.20,000 in one case, subject to Rs.1.00 lakh per annum | -- |
| | (ii) Perishable items like plant, food material, consumables, drugs, fertilizers, etc | Full powers | Full powers | Rs.50,000 in one case, subject to Rs.4.00 lakh per annum | Rs.20,000 in one case, subject to Rs.2.00 lakh per annum | Rs.10,000 in one case, subject to Rs.1.00 lakh per annum | -- |
| | (iii)Unusable books and periodicals. | Full powers | Full powers | Full powers | Full powers | Full powers | -- |
| | (iv) Obsolete or unserviceable equipment. | Full powers | Full powers | Rs.50,000 in one case subject to Rs.4.00 lakh per annum | Rs.20,000 in one case subject to Rs.2.00 lakh per annum | Rs.10,000 in one case subject to Rs.1.00 lakh per annum | -- |
| | (v) Vehicles beyond economic repair, subject to certification by the RTO. | Full powers | -- | -- | -- | -- | -- |

| | | | | | | | |
|---|---|---|---|---|---|---|---|
| 19 | To sanction expenditure on Advertisement.<br>(i) To sanction publishing of official advertisements subject to guidelines from Department/ Directorate of Information and Publicity, and also subject to availability of grants for this purpose. | Full powers to HoD only in case of for publishing Tender documents or statutory/legal matters.<br>In other Cases, Rs.2.00 lakh in one case, subject to Rs.20.00 lakh per annum | Rs.40,000 in one case subject to Rs.5.00 lakh per annum | Rs.30,000 in one case subject to Rs.5.00 lakh per annum | Rs.20,000 in one case subject to Rs.2.00 lakh per annum | Rs.10,000 in one case subject to Rs.50,000 per annum | --- |
| | (ii) To sanction printing of publicity material under government programs<br>(Rule 55(1) of MCE) | Full powers | Full powers | Rs.20,000 in one case subject to Rs.2.00 lakh per annum | Rs.5,000 in one case subject to Rs.20,000 per annum | Rs.2000 in one case subject to Rs.10,000 per annum | Rs.1000 in one case subject to Rs.5,000 per annum |
| 20 | Hiring of vehicles subject to following the instructions issued by DPAR in this regard if the permission for vehicles have been obtained by Finance Department<br>(Presently G.O DPAR 30 SHIVANI | As per G.O. issued by DPAR and FD from time to time subject to following conditions:<br>• Vehicle should be sanctioned by Finance Department prior to outsourcing.<br>• Information on vehicles should be reported in module/format created by FD without which budget shall not be provided. | | | | | |

| | | | | | | | |
|---|---|---|---|---|---|---|---|
| | 2019 Dt:31-3-2022 Shall be followed) | | | | | | |
| 21 | <u>Training</u> To sanction training programmes, and incur expenditure on honorarium, transport, training material, contingency, etc. subject to the programme being authorised under some approved scheme. | Full powers | Rs.80,000 at a time, subject to Rs.8.00 lakh per annum | Rs.40,000 at a time subject to Rs.4.00 lakh per annum | Rs.20,000 at a time subject to Rs.2.00 lakh per annum. | Rs.8,000 at a time subject to Rs.80,000 per annum | Rs.4,000 at a time subject to Rs.40,000 per annum |
| 22 | <u>Advances</u><br><br>(i) To sanction tour/ transfer advance (Vide Article 234-236 of KFC) | Full powers | Full powers | Full powers | Full powers | Full powers | -- |
| | (ii) To sanction house building advance as per rules and subject to allotment<br><br>(Vide Article 211-216 of KFC)<br><br>As per the limit prescribed by FD from time to time (Current limit as per G.O. No.ಆಇ 8 ಮಕಮು 2017 ದಿ:16-12-2017) | Full powers | Full powers | Full powers | Full powers | Full powers | -- |

| | | | | | | | |
|---|---|---|---|---|---|---|---|
| | (iii)To sanction vehicle purchase advance as per rules and subject to allotment.<br><br>(Vide Article 218-225 of KFC) | Full powers | Full powers | Full powers | Full powers | Full powers | -- |
| 23 | <u>Hiring of building in consultation with PWD/Rent Controller only after certifying that Government building is available</u><br><br>(Rule 55(46) of MCE) | 1) Rs.2.00 lakh for a building for a month (except Bengaluru Urban)<br><br>2) Rs.5.00 lakh for a building in Bengaluru Urban for a month | Rs.50,000 for a building for a month | Rs.40,000 for a building for a month | Rs.20,000 for a building for a month | Rs.10,000 for a building for a month | -- |
| 24 | <u>Exhibition</u><br>To sanction expenditure for participating in Dasara Exhibition or other similar important state exhibitions, within the State or similar activity for creating awareness. | Full powers | Rs.5.00 lakh per annum | Rs.2.00 lakh per annum | 1.00 lakh per annum | -- | |
| [redacted] | [redacted] | [redacted] | | | | | |

| | | | | | | | |
|---|---|---|---|---|---|---|---|
| 26 | <u>Refunds</u><br>To sanction refund of<br>revenue including fees, fines, etc. and to refund wrong or excess credit, subject to the claim being established with authenticated documents & to certify as below:<br>(Vide Article 142 of KFC)<br>i) Each claim is supported by treasury certificate or original credit and its non-payments<br>ii) The claim is preferred within 3 years of original credits<br>iii) It is clearly established that it was a case of wrong or excess credits. | Up to 3 years. | Up to 3 years. | Up to 3 years. | -- | -- | -- |
| | | As per the instructions/conditions given in G.O. No. FD 35 TAR 2019 Dated 16-10-2019 | | | | | |
| 27 | <u>Drawal of money on AC bills</u>, etc. subject to budgetary limits and | AC bill may be drawn up to Rs. 2 lakh on the counter signature of controlling officer. For A.C. bills above Rs.2.00 lakh, the specific authorization has to be obtained from the Finance Department. NDC bills shall be submitted to Treasury & AG within 30 days from the drawal of amount on AC bills, failing which the next bill submitted by the same DDO shall not be passed in Treasury.<br>The limit of Rs. 2 lakh for drawal of money on AC bill is relaxed for certain category of expenditure as per circular No. FD 1 TCE 2010, dt:21.12.2010. | | | | | |

| | | | | | | | |
|---|---|---|---|---|---|---|---|
| | appropriate authorization.<br><br>Up to Rs.2.00 lakh, the authorization can be given by the Controlling Officer, For A.C. bills above Rs.2.00 lakh, the authorization has to be obtained from the Finance Department. | | | | | | |
| 28 | <u>Reappropriation</u><br><br>To sanction reappropriation from one detailed head of account to another within the same major head in the Departmental budget provided it does not involve.<br><br>(Vide Article 308 to 314 of KFC)<br><br>a) Diversion of provision for schemes eligible for assistance from central Govt. or other institutions to other schemes.<br>b) The undertaking of a recurring liability | Rs.10.00 lakh between two units of appropriation under same major head and within same demand.<br><br>This has to be done through the module which will be provided by FD/Treasury. | -- | -- | -- | -- | -- |

| | | | | | | | |
|---|---|---|---|---|---|---|---|
| | c) An increase in the allotment for secret service expenditure<br>d) Expenditure on a new service (Refer G.O. No FD 14 BPA 2015 Dt: 06-08-2015)<br>e) An increase on an item the provision for which has been specifically reduced by a vote of the legislature.<br>f) From charged item to voted and vice-versa.<br>g) Diversion of funds for purposes other than that provided in the Budget<br>h) From Capital to Revenue and vice versa | | | | | | |
| 29 | <u>To sanction arrear claims Group B, C&D Officers</u><br><br>(Vide Article 20 (a) of KFC) | Upto 6 years in each case. | Upto 6 years in each case. | Upto 3 years | Upto 2 years | Upto 1 year | |
| 30 | <u>To sanction arrear claims on promotion,</u> permanent or officiation and other arrangements | Up to 6 years | 5 years | 5 years | 5 years | -- | -- |

| | | | | | | | |
|---|---|---|---|---|---|---|---|
| | involving alterations in the pay of subordinate non-gazetted Govt. servants, not sanctioned by them within one year from the earliest date on which they could be sanctioned (Vide Article 20 (d) of KFC and Rule 20 of KCSRs). | | | | | | |
| 31 | <u>To sanction payment of arrear claims on accounts of contingent charges (including supplies and services) TA to non-officials for attending meetings, grants-in-aid not exceeding Rs.3000 in each case preferred one year after their becoming due vide</u> article 21 Note. 1 of KFC ) | Upto 6 years | Up to 3 years | Up to 3 years | -- | -- | -- |
| 32 | <u>To sanction permanent advances</u> for contingent expenditure subject to the procedure prescribed in Rule 24 of MCE shall be followed | Permanent advances shall be sanctioned & revised only with the concurrence of FD. | | | | | |

| | | | | | | | |
|---|---|---|---|---|---|---|---|
| 33 | To sanction charges for insurance on special goods of Government such as mathematical and scientific instruments, articles made of glass and other fragile articles when such insurance is a condition of transport (vide Rule 55(32) of MCE) | Full powers | -- | -- | -- | -- | -- |
| 34 | The powers to sanction for payment of advance deposits in respect of Group 'C' and 'D' employees for undergoing treatment in the Hospitals subject to fulfillment of the conditions stipulated in Karnataka Civil Services (Medical Attendance) Rules. 1963: | Full powers | -- | -- | -- | -- | -- |

| Sl. No | Description of power | Heads of Department | Divisional Level Officers | District Level Officers | Sub Division Level Officers | Taluk Level Officers | Sub laluk Level Officers |
|---|---|---|---|---|---|---|---|
| 1 | 2 | 3 | 4 | 5 | 6 | 7 | 8 |
| 35 | To authorize subordinate Government servants to proceed on duty beyond the limits of their charges but within the State (vide rule 16(a) of KCSRs) | Full powers | 30 days in case of Group-A Officers. Full Powers in case of Group-B, C and D Government Servants. | 30 days in case of Group-A Officers. Full Powers in case of Group-B, C and D Government Servants. | -- | -- | -- |
| 36 | To authorize subordinate Government servant to proceed on duty beyond the limits of their charges outside the State within India (vide Rule 16(b) of KCSRs) | Full powers | 1) Non Gazetted - Full powers<br>2) Gazetted Upto 30 days | 1) Non Gazetted - Full powers<br>2) Gazetted - Upto 30 days | -- | -- | -- |
| 37 | To sanction the acceptance of remuneration by Government servants under their control for work as examiners for various examinations conducted by Government departments or bodies set up by Government or Universities within the State in accordance with the scales sanctioned (vide Rule 28(d) of KCSRs). | Full powers | Full powers | Full powers | Full powers | Full powers | Full powers |
| * | Sanction need not be required if the remuneration is agreed/sanctioned under a Government Order/OM issued by a competent authority. | | | | | | |
| 38 | To sanction the acceptance of fees by Government | Full powers | Full powers | Full powers | -- | -- | -- |

| | | | | | | | |
|---|---|---|---|---|---|---|---|
| | servants under their control from a private person, a private body or a public body whose funds are administered by Government when not covered by any rules, special or local law or orders of Government (vide Rules 28 and 29 of KCSRs). | | (Group-B, C & D Government Servants) | (Group-B, C & D Government Servants) | | | |
| * | Sanction from Competent Authority is required for accepting fees from private persons or private bodies. | | | | | | |
| [redacted] | [redacted] | [redacted] | | | | | |
| | [redacted] | | [redacted] | | [redacted] | [redacted] | |
| [redacted] | | | | [redacted] | [redacted] | [redacted] | |
| [redacted] | | | | | | | |
| * | The HoD shall examine reduction in posts when longer term extension is to be given. | | | | | | |
| 40 | To sanction the extension of joining time to subordinate non- gazetted Government servants (vide Rule 86 of KCSRs) | Upto 15 days | Upto 15 days | --- | --- | -- | --- |

| | | | | | | | |
|---|---|---|---|---|---|---|---|
| 41 | To sanction maternity leave to female Government servants (vide Rule 135 of KCSRs)<br>i) Gazetted | Full powers | Full powers | Full powers | Full powers | Full powers | -- |
| | ii) Non-gazetted | Full powers | Full powers | Full powers | Full powers | Full powers | -- |
| 42 | Sanction of leave other than special disability leave to subordinate Government servants (vide Rule 192 and 196 of KCSRs); Government servants who are in the scale of pay of:- | | | | | | |
| | i) Gr- 'A' Services | 4months | 3 months | 2 months | --- | --- | --- |
| | ii)Gr- 'B' Services | 6 months | 4 months | 3 months | 2months | --- | --- |
| | iii) Gr- 'C' & 'D' Services<br>Note: The powers to sanction leave as above includes the powers to sanction leave preparatory to retirement but does not include the powers to refuse earned leave applied for as leave preparatory to retirement. | Full powers | Full powers | Full powers | Full powers | Full powers | Full powers |
| 43 | Sanction of encashment of earned leave once in a year in accordance with Rule 118 of KCSRs. | Full powers | Full powers | Full powers | Full powers | Full powers | Full powers |
| 44 | Encashment of earned leave at the time of retirement or at the time of death while in service in accordance with Rule 118(A) of KCSRs. | Full powers | Full powers | Full powers | Full powers | Full powers | -- |

| | | | | | | | |
|---|---|---|---|---|---|---|---|
| 45 | To sanction disbursement to subordinate non-gazetted Government servants of arrears of leave salary arising as a result of the sanction or commutation of leave more than one year from the date of relief (vide Rule 198 of KCSRs) | Full powers | Full powers | Full powers | Full powers | Full powers | -- |
| 46 | To order the retirement on invalid pension of non-gazetted Government servants appointed by them or by a lower authority, who by bodily or mental infirmity are permanently incapacitated from the public service (vide rule 273 of KCSRs) | Full powers | Full powers | Full powers | --- | - | --- |
| 47 | To sanction in exceptional cases, road metreage both ways for road journeys made by subordinate Government servants between places connected by rail vide (Rule 462 (h) of KCSRs) | Full powers | Full powers | --- | --- | --- | --- |
| 48 | To sanction daily allowance for halts on tour exceeding 10 days at a place to subordinate Government servants (vide Rule 516 of KCSRs) | Full Powers. | 30 days in case of Group-A officers<br><br>Full powers in case of Group-B, C & D in Government Servants. | 30 days in case of Group-A officers<br><br>Full powers in case of Group-B, C & D in Government Servants. | --- | --- | — |
| * | This provision is not applicable while under training. | | | | | | |

| | | | | | | | |
|---|---|---|---|---|---|---|---|
| 49 | To allow subordinate Government servants on transfer, the actual cost of transport by rail or other craft or their conveyance at owner's risk (vide Rule 532 (3) (A) (1) (4) (2) of KCSRs) | Full powers | Full powers | Full powers | Full powers | Full powers | — |
| 50 | Sanction of compulsory waiting period to Officers/employees with a condition that the sanctioning authority should verify that the officer/official was actually waiting for posting and there was delay in issuing posting orders by the competent authority and no order of posting was issued earlier. (as per Rule 8 (15) (f) of K.C.S.Rs.) | Full powers in respect of Group – A,B,C & D Officers/Employees | --- | --- | --- | --- | — |

**General Conditions:**

1. All relevant rules, procedures and instructions under the Karnataka Transparency in Public Procurement Act and Rules, shall be followed to ensure transparent and cost-effective procurement of Goods & Services.
2. All procurement should be within the annual approved budgetary grants. These Delegated powers including 'Full Powers' are delegated in respect of Administrative approval of works to be exercised subject budgetary grands .
3. It will be the responsibility of the officer exercising the delegated powers to ensure that the items of procurement are essential and that the process being followed is as per the KTPP Act and Rules so as to make quality procurement at competitive prices.
4. This order of delegation of financial powers does not supersede economy orders issued by Finance Department. Similarly, specific orders issued from time to time by e-Governance on procurement of computers, from DPAR on purchase or hiring of vehicles, outsourcing etc. need to be followed.

5. For new schemes, only after approvals at all levels and issue of Govt. Order regarding operationalising the scheme, these delegations will apply.
6. These delegated powers cannot be further subdelegated by the departments.
7. For items at Sl. No: 7, 11 & 12 departments may specify Consumables, items & implements used to implement Govt. Programmes/ Schemes & Miscellaneous items used in hospitals / child homes / Hostels/Anganawadis / Schools / ANM Subcenters etc. they are procuring with the concurrence of Finance Department through Office Memorandam, for more clarity.

28.10.2024


**(H.A SHOBHA)**
Joint Secretary to Government
Finance Department (FR & BCC)

Scanned with OKEN Scanner





Scanned with OKEN Scanner



Scanned with OKEN Scanner





Scanned with OKEN Scanner

Scanned with OKEN Scanner



Scanned with OKEN Scanner

[redacted]

Scanned with OKEN Scanner



[illegible] AYUSH/[illegible]/EST/[illegible]-DIRECTORATE OF AYUSH (Computer No. [illegible])
[illegible] AYUSH-AO, ADMINISTRATIVE OFFICER, DIRECTORATE OF AYUSH on [illegible]

Scanned with OKEN Scanner

ಅನುಬಂಧ-3

ಕ್ರಮ ಸಂಖ್ಯೆ:......
ವಿಭಾಗ: EST-7
ದಿನಾಂಕ: 12/5/25

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳ ಆಯುಷ್ ಆಸ್ಪತ್ರೆ/ಚಿಕಿತ್ಸಾಲಯಗಳಲ್ಲಿ ಔಷಧಿ ಮತ್ತು ಉಪಕರಣಗಳ ಖರೀದಿಯಲ್ಲಿ ಅಕ್ರಮ ಆರೋಪಗಳಿಗೆ ಸಂಬಂಧಿಸಿದ ಪ್ರಕರಣವನ್ನು ತನಿಖೆಗಾಗಿ ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984 ರ ಕಲಂ - 7 (2-ಎ) ರನ್ವಯ ಲೋಕಾಯುಕ್ತಕ್ಕೆ ವಹಿಸುವ ಬಗ್ಗೆ.

**ಓದಲಾಗಿದೆ:** ಆಯುಷ್ ಇಲಾಖೆ ಇವರ ಏಕಕಡತ ಸಂಖ್ಯೆ: AYUSH/7/DDA/2025(1743493).

**ಪ್ರಸ್ತಾವನೆ:**

ಮೇಲೆ ಓದಲಾದ ಆಯುಕ್ತರು, ಆಯುಷ್ ಇಲಾಖೆ ಇವರ ಏಕಕಡತದಲ್ಲಿ, ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳಲ್ಲಿನ ಆಯುಷ್ ಆಸ್ಪತ್ರೆ/ ಚಿಕಿತ್ಸಾಲಯಗಳ ಔಷಧಿಗಳನ್ನು ಮಾರುಕಟ್ಟೆ ದರಕ್ಕಿಂತ ಅಧಿಕವಾದ ದರದಲ್ಲಿ ಖರೀದಿಸಿರುವುದಕ್ಕೆ ಸಂಬಂಧಿಸಿದಂತೆ ಸ್ವೀಕೃತವಾಗಿದ್ದ ದೂರಿನ ಕುರಿತು ದಿನಾಂಕ: 27.03.2025 ರಲ್ಲಿ ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳ ಆಯುಷ್ ಆಸ್ಪತ್ರೆ / ಚಿಕಿತ್ಸಾಲಯಗಳಿಗೆ ಭೇಟಿ ನೀಡಿ, ಪ್ರಾಥಮಿಕ ತನಿಖೆ ನಡೆಸಿ ವರದಿ ಸಲ್ಲಿಸಲು ಉಪ ನಿರ್ದೇಶಕರು (ಆಯುರ್ವೇದ) ಮತ್ತು ಉಪ ನಿರ್ದೇಶಕರು (ಯುನಾನಿ) ಇವರುಗಳಿಗೆ ಸೂಚಿಸಲಾಗಿತ್ತು. ಅದರಂತೆ ಉಪ ನಿರ್ದೇಶಕರು (ಆಯುರ್ವೇದ) ಮತ್ತು ಉಪ ನಿರ್ದೇಶಕರು (ಯುನಾನಿ) ಇವರುಗಳು ದಿನಾಂಕ: 28.03.2025 ಮತ್ತು 29.03.2025 ರಂದು ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳ ಆಯುಷ್ ಆಸ್ಪತ್ರೆ / ಚಿಕಿತ್ಸಾಲಯಗಳಿಗೆ ಭೇಟಿ ನೀಡಿ, ಪ್ರಾಥಮಿಕ ತನಿಖೆ ನಡೆಸಿ ವರದಿ ಸಲ್ಲಿಸಿದ್ದು, ಸದರಿ ವರದಿಯಲ್ಲಿನ ಪ್ರಮುಖ ಅಂಶಗಳು ಈ ಕೆಳಕಂಡಂತಿವೆ:-

- 2024-25ರ ಅವಧಿಯಲ್ಲಿ GeM ಪೋರ್ಟಲ್‌ನಲ್ಲಿ, ಜಿಲ್ಲಾ ಪಂಚಾಯತ್ ನಿಧಿಯಡಿಯಲ್ಲಿ ನಿಗದಿತ ಕಾರ್ಯವಿಧಾನಗಳನ್ನು ಅನುಸರಿಸದೆ ಔಷಧಿಗಳು ಮತ್ತು ಸಲಕರಣೆಗಳ ಟೆಂಡರ್‌ಗಳನ್ನು ಕರೆಯಲಾಗಿರುತ್ತದೆ.

- ಇಂಡೆಂಟ್ ಮತ್ತು ಅಗತ್ಯ ಮೌಲ್ಯಮಾಪನದ (need assessment) ಕಾರ್ಯವಿಧಾನವನ್ನು ಅನುಸರಿಸಲಾಗಿಲ್ಲ. ಅನೇಕ ವೈದ್ಯರು ಯಾವುದೇ ಇಂಡೆಂಟ್ ಪತ್ರವನ್ನು ನೀಡಿರಲಿಲ್ಲ. ಆದಾಗ್ಯೂ, ಔಷಧಿಗಳು ಮತ್ತು ವೈದ್ಯಕೀಯ ಉಪಕರಣಗಳನ್ನು ಖರೀದಿಸಲಾಗಿದೆ.

- ಖರೀದಿಯನ್ನು ಜಿಲ್ಲಾ ಆಯುಷ್ ಅಧಿಕಾರಿ, ಬಳ್ಳಾರಿ ಕಚೇರಿ ಮೂಲಕ ಮಾಡಲಾಗಿರುತ್ತದೆ. ಮಾರಾಟಗಾರರಿಗೆ ಹಣ ಪಾವತಿಸಲು ಆಯಾ ವೈದ್ಯರು ಖಜಾನೆಗೆ ಬಿಲ್‌ಗಳನ್ನು ಸಲ್ಲಿಸಿರುತ್ತಾರೆ. ಹೊಸಪೇಟೆಯಲ್ಲಿ, ಡಾ. ಗುರು ವಾಸುದೇವ್ ರೆಡ್ಡಿ ಇವರು ತಮ್ಮ ಆರ್ಥಿಕ ಅಧಿಕಾರವನ್ನು ಮೀರಿ ಪಾವತಿಗಳನ್ನು ಮಾಡಿರುವುದು ಕಂಡುಬಂದಿರುತ್ತದೆ. ಸದರಿಯವರಿಗೆ ರೂ. 5.00 ಲಕ್ಷಗಳವರೆಗೆ ಆರ್ಥಿಕ ಪ್ರತ್ಯಾಯೋಜನೆಯಿದ್ದರೂ ರೂ. 39.00 ಲಕ್ಷಗಳ ಬಿಲ್‌ಗಳನ್ನು ಖಜಾನೆಗೆ ಸಲ್ಲಿಸಿರುವುದು ತಿಳಿದುಬಂದಿದೆ. ಇಂತಹ ಇತರ ಪ್ರಕರಣಗಳು ಸಹ ಇರಬಹುದಾಗಿರುತ್ತದೆ.

- ಔಷಧಿಗಳು ಮತ್ತು ಸಲಕರಣೆಗಳ ಸ್ವರೂಪ ಮತ್ತು ಪ್ರಮಾಣ, ಅಗತ್ಯವಿಲ್ಲದಿದ್ದರೂ ಅಥವಾ ವಾಸ್ತವಿಕ ಅವಶ್ಯಕತೆಗಳಿಗಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಖರೀದಿಸಿರುವುದು. ಕಟ್ಟಡದ ಒಳಗೆ ಔಷಧಿ ಸಲಕರಣೆಗಳನ್ನು ಇರಿಸಲು ಸ್ಥಳವಿಲ್ಲದ ಕಾರಣ ಔಷಧಾಲಯದ ಆವರಣದಲ್ಲಿ ಸ್ಟೀಮ್ ಚೇಂಬರ್‌ಗಳನ್ನು ಇರಿಸಲಾಗಿರುತ್ತದೆ. ಕಳೆದ ಹಲವಾರು ವರ್ಷದಲ್ಲಿ ಖರೀದಿಸಲಾದ ಹೊಸ ವೈದ್ಯಕೀಯ ಉಪಕರಣಗಳು ಮತ್ತು ಪೀಠೋಪಕರಣಗಳನ್ನು ಅಲ್ಮೇರಾಗಳು ಮತ್ತು ಕೋಣೆಗಳಲ್ಲಿ ಇಟ್ಟಿರುವುದು ಕಂಡುಬಂದಿದೆ. ಅವುಗಳನ್ನು ಬಳಸಿರುವುದಕ್ಕೆ ಯಾವುದೇ ಪುರಾವೆಗಳಿರುವುದಿಲ್ಲ.

12/5/25

- ಪಂಚಕರ್ಮ ಉಪಕರಣಗಳ ದರವನ್ನು, GeM ಪೋರ್ಟಲ್‌ನಲ್ಲಿ ನೇರ ಖರೀದಿಗಾಗಿ ಇದೇ ತರಹದ ಉಪಕರಣಗಳಿಗೆ ಪ್ರಕಟಿತ ದರ ಮತ್ತು ಮಾರುಕಟ್ಟೆ ದರಗಳ ಜೊತೆಗೆ ಹೋಲಿಸಲಾಗಿರುತ್ತದೆ. ಹೀಗೆ ಹೋಲಿಸಿದಾಗ GeM ಪೋರ್ಟಲ್‌ನಲ್ಲಿ ಹೆಚ್ಚಿನ ದರವನ್ನು ನೀಡಿ ಖರೀದಿಸಿರುವುದು ಕಂಡುಬರುತ್ತದೆ.

- ತನಿಖೆಯ ಸಂದರ್ಭದಲ್ಲಿ ಔಷಧಿಗಳು, ಉಪಕರಣಗಳು ಮತ್ತು ಪೀಠೋಪಕರಣಗಳ ಸ್ಟಾಕ್ ಪುಸ್ತಕಗಳು ಮತ್ತು ಇ-ವೇ ಬಿಲ್‌ಗಳು ಲಭ್ಯವಿರುವುದಿಲ್ಲ. ಔಷಧಿಗಳು ಮತ್ತು ಉಪಕರಣಗಳನ್ನು ಸ್ವೀಕರಿಸದೇ ಪೂರೈಕೆದಾರರಿಗೆ ಹಣ ಪಾವತಿ ಮಾಡಲಾಗಿದೆ ಮತ್ತು ಸಾಮಗ್ರಿಗಳನ್ನು, ಸ್ಟಾಕ್ ಪುಸ್ತಕಗಳನ್ನು ಬದಲಾಯಿಸುವ, ಅಥವಾ ನಾಶಪಡಿಸುವ ಸಾಧ್ಯತೆಯಿರುತ್ತದೆ.

- ಜಿಲ್ಲಾ ಆಯುಷ್ ಅಧಿಕಾರಿ, ಬಳ್ಳಾರಿ ರವರು 2024-25ರ ಅವಧಿಯಲ್ಲಿ ಜಿಲ್ಲಾ ಪಂಚಾಯತ್ ಬಜೆಟ್ ಅಡಿಯಲ್ಲಿ ಖರೀದಿಸಿದ ಪೀಠೋಪಕರಣಗಳು ಮತ್ತು ಸಲಕರಣೆಗಳ ಬೆಲೆ ರೂ 3 ಕೋಟಿ ಮೀರಿದೆ ಎಂದು ಅಂದಾಜಿಸಲಾಗಿದೆ. 2023-24ರ ಅವಧಿಯಲ್ಲಿಯೂ ಔಷಧಿಗಳು ಮತ್ತು ಉಪಕರಣಗಳು / ಪೀಠೋಪಕರಣಗಳ ಖರೀದಿಯಲ್ಲಿ ಇದೇ ರೀತಿಯ ಅಕ್ರಮಗಳು ನಡೆದಿರುವ ಸಾಧ್ಯತೆ ಇರುತ್ತದೆ.

ಒಟ್ಟಾರೆಯಾಗಿ ಹಣಕಾಸಿನ ದುರುಪಯೋಗ, ಖರೀದಿ ಮಾನದಂಡಗಳ ಉಲ್ಲಂಘನೆ, ಅತಿಯಾದ/ವಂಚನೆಯ ಖರೀದಿಗಳು, ಪೂರೈಕೆದಾರರೊಂದಿಗಿನ ಶಾಮೀಲು, ಸಂಭಾವ್ಯ ಭ್ರಷ್ಟಾಚಾರ ಮತ್ತು ಅದಕ್ಷತೆಯನ್ನು ಸೂಚಿಸುವ ಪುರಾವೆಗಳು ಪ್ರಾಥಮಿಕ ತನಿಖೆಯಿಂದ ಕಂಡುಬರುತ್ತದೆ. ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳ ಔಷಧಾಲಯಗಳು ಮತ್ತು ಆಸ್ಪತ್ರೆಗಳಲ್ಲಿ ಈ ಹಿಂದೆ ಖರೀದಿಸಿ ಬಳಸದೇ ಇರುವ ಹೆಚ್ಚಿನ ದಾಸ್ತಾನುಗಳನ್ನು ಅವ್ಯವಸ್ಥಿತವಾಗಿ ಇಟ್ಟಿರುವುದು ಕಂಡುಬರುತ್ತದೆಂದು ತಿಳಿಸಿ, ಈ ಪ್ರಕರಣದಲ್ಲಿ ಭಾಗಿಯಾಗಿರುವ ಈ ಕೆಳಕಂಡ ಅಧಿಕಾರಿ/ಸಿಬ್ಬಂದಿಗಳನ್ನು ಸರ್ಕಾರಿ ಸೇವೆಯಿಂದ ಅಮಾನತ್ತುಗೊಳಿಸಿ, 2023-24 ಮತ್ತು 2024-25ನೇ ಸಾಲಿನಲ್ಲಿ ಬಳ್ಳಾರಿ ಮತ್ತು ವಿಜಯನಗರ ಜಿಲ್ಲಾ ಆಯುಷ್ ಕಛೇರಿಗಳಲ್ಲಿ ಖರೀದಿಸಿರುವ ಸಾಮಾಗ್ರಿಗಳಿಗೆ ಸಂಬಂಧಿಸಿದಂತೆ ಸಮಗ್ರ ತನಿಖೆ ನಡೆಸಿ, ಸಂಬಂಧಪಟ್ಟವರ ಮೇಲೆ ಜವಾಬ್ದಾರಿ ಮತ್ತು ಹೊಣೆಗಾರಿಕೆಯನ್ನು ನಿಗದಿಪಡಿಸಲು ಶಿಫಾರಸ್ಸು ಮಾಡಿರುತ್ತಾರೆ.

1. ಡಾ.ಸರಳಾ ದೇವಿ, ಜಿಲ್ಲಾ ಆಯುಷ್ ಅಧಿಕಾರಿ, ಬಳ್ಳಾರಿ ಮತ್ತು ಪ್ರಭಾರಿ ಜಿಲ್ಲಾ ಆಯುಷ್ ಅಧಿಕಾರಿ, ವಿಜಯನಗರ ಜಿಲ್ಲೆ.
2. ಶ್ರೀ ಶರಣಪ್ಪ, ಜಿನಾಗ, ಆಡಳಿತಾಧಿಕಾರಿ, ಜಿಲ್ಲಾ ಆಯುಷ್ ಕಚೇರಿ, ಬಳ್ಳಾರಿ
3. ಶ್ರೀ ಖಲಂದರ್, ಸೂಪರಿಂಟೆಂಡೆಂಟ್, ಜಿಲ್ಲಾ ಆಯುಷ್ ಕಚೇರಿ, ಬಳ್ಳಾರಿ.

ಆಯುಕ್ತರು, ಆಯುಷ್ ಇಲಾಖೆ ಇವರ ಪ್ರಸ್ತಾವನೆ ಹಾಗೂ ಲಭ್ಯವಿರುವ ದಾಖಲೆಗಳನ್ನು ಪರಿಶೀಲಿಸಿ, ಔಷಧಿಗಳ ಮತ್ತು ಉಪಕರಣಗಳ ಖರೀದಿಯಲ್ಲಿ ಅಕ್ರಮ ಹಾಗೂ ಕರ್ತವ್ಯ ಲೋಪವೆಸಗಿ ಭ್ರಷ್ಟಾಚಾರ ನಡೆಸಿರುವುದು ಮೇಲ್ನೋಟಕ್ಕೆ ಕಂಡುಬಂದಿರುವ ಹಿನ್ನೆಲೆಯಲ್ಲಿ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ ಸರ್ಕಾರವು ಅಕ್ರಮ ಹಾಗೂ ಕರ್ತವ್ಯ ಲೋಪವೆಸಗಿರುವ ಬಗ್ಗೆ ತನಿಖೆ ನಡೆಸಲು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ – 7 (2-ಎ) ರನ್ವಯ ಮಾನ್ಯ ಲೋಕಾಯುಕ್ತರಿಗೆ ವಹಿಸಲು ತೀರ್ಮಾನಿಸಿ, ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಆಕುಕ 187 [illegible] [illegible], ಬೆಂಗಳೂರು,**
**ದಿನಾಂಕ: [illegible]**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2023-24 ಮತ್ತು 2024-25ನೇ ಸಾಲಿನಲ್ಲಿ ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳ ಆಯುಷ್ ಆಸ್ಪತ್ರೆ/ಚಿಕಿತ್ಸಾಲಯಗಳಿಗೆ ಔಷಧ

ಮತ್ತು ಉಪಕರಣಗಳ ಖರೀದಿಯಲ್ಲಿ ಅಕ್ರಮ, ಭ್ರಷ್ಟಾಚಾರ ಮತ್ತು ಕರ್ತವ್ಯಲೋಪದ ಆರೋಪಗಳಿಗೆ ಸಂಬಂಧಿಸಿದಂತೆ ಕೆಳಕಂಡ ಅಧಿಕಾರಿ/ಸಿಬ್ಬಂದಿಗಳ ಮೇಲೆ ತನಿಖೆ ನಡೆಸಲು ಪ್ರಕರಣವನ್ನು, ಕರ್ನಾಟಕ ಲೋಕಾಯುಕ್ತ ಕಾಯ್ದೆ-1984ರ ಕಲಂ7(2-ಎ)ರನ್ವಯ ಮಾನ್ಯ ಲೋಕಾಯುಕ್ತರ ತನಿಖೆಗೆ ವಹಿಸಿ ಆದೇಶಿಸಿದೆ.

1. ಡಾ.ಸರಳಾ ದೇವಿ, ಜಿಲ್ಲಾ ಆಯುಷ್ ಅಧಿಕಾರಿ, ಬಳ್ಳಾರಿ ಮತ್ತು ಪ್ರಭಾರಿ ಜಿಲ್ಲಾ ಆಯುಷ್ ಅಧಿಕಾರಿ, ವಿಜಯನಗರ ಜಿಲ್ಲೆ.
2. ಶ್ರೀ ಶರಣಪ್ಪ, ಜಿನಾಗಾ, ಆಡಳಿತಾಧಿಕಾರಿ ಜಿಲ್ಲಾ ಆಯುಷ್ ಕಚೇರಿ ಬಳ್ಳಾರಿ
3. ಶ್ರೀ ಖಲಂದರ್, ಸೂಪರಿಂಟೆಂಡೆಂಟ್, ಜಿಲ್ಲಾ ಆಯುಷ್ ಕಚೇರಿ ಬಳ್ಳಾರಿ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಶ್ರೀಪತಿ ಪಿ.ಕೆ.)
ಸರ್ಕಾರದ ಅಧೀನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ಭಾವೈಪ ಮತ್ತು ಸಮನ್ವಯ)

**ಇವರಿಗೆ:-**

1. ಪ್ರಧಾನ ಮಹಾಲೇಖಪಾಲರು,(ಲೆಕ್ಕ ಮತ್ತು ವಿಭಾಗ) ಕರ್ನಾಟಕ ವೃತ್ತ, ಬೆಂಗಳೂರು
2. ಮಾನ್ಯ ಲೋಕಾಯುಕ್ತರು, ಕರ್ನಾಟಕ ಬಹುಮಹಡಿ ಕಟ್ಟಡ, ಬೆಂಗಳೂರು
3. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬಹುಮಹಡಿ ಕಟ್ಟಡ, ಬೆಂಗಳೂರು (ಪ್ರಕರಣಕ್ಕೆ ಸಂಬಂಧಿಸಿದ ದಾಖಲೆಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಲಾಗಿದೆ)
4. ಆಯುಕ್ತರು, ಆಯುಷ್ ಇಲಾಖೆ, ಧನ್ವಂತರಿ ರಸ್ತೆ, ಬೆಂಗಳೂರು.
5. ಶಾಖಾ ರಕ್ಷಾ ಕಡತ /ಹೆಚ್ಚುವರಿ ಪ್ರತಿ

**ಪ್ರತಿ ಮಾಹಿತಿಗಾಗಿ:-**

1. ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಕಾಸಸೌಧ, ಬೆಂಗಳೂರು.
2. ಸರ್ಕಾರ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸಸೌಧ, ಬೆಂಗಳೂರು.
3. ಸರ್ಕಾರ ಅಪರ ಕಾರ್ಯದರ್ಶಿ ರವರ ಆಪ್ತ ಸಹಾಯಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸಸೌಧ, ಬೆಂಗಳೂರು.

CAO

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಗದಗ ಜಿಲ್ಲೆಯ ಜಿಲ್ಲಾ ಆಯುಷ್ ಕಛೇರಿಯಲ್ಲಿ, ಔಷಧಿ ಮತ್ತು ಸಾಧನೋಪಕರಣಗಳ ಖರೀದಿಯ ಅವ್ಯವಹಾರ ಪ್ರಕರಣದಲ್ಲಿ ಆರೋಪಿತ ಅಧಿಕಾರಿ/ಸಿಬ್ಬಂದಿಗಳನ್ನು ಅಮಾನತ್ತುಗೊಳಿಸುವ ಕುರಿತು.

**ಓದಲಾಗಿದೆ:** ಆಯುಷ್ ಇಲಾಖೆ ಇವರ ಏಕಕಡತ ಸಂಖ್ಯೆ: AYUSH/69/EST7/2025-AEST-DIRECTORATE OF AYUSH (1999827)

**ಪ್ರಸ್ತಾವನೆ:**

ಮೇಲೆ ಓದಲಾದ ಆಯುಕ್ತರು, ಆಯುಷ್ ಇಲಾಖೆ ಇವರ ಏಕಕಡತದಲ್ಲಿ, ಆಯುಷ್ ಇಲಾಖೆಯ, ಜಿಲ್ಲಾ ಆಯುಷ್ ಕಛೇರಿಗಳಲ್ಲಿ ಜಿಲ್ಲಾ ಪಂಚಾಯತ ಅನುದಾನದಲ್ಲಿ ನಿರ್ವಹಿಸಲಾಗುವ ಖರೀದಿ ಪ್ರಕ್ರಿಯೆಗೆ ಸಂಬಂಧಿಸಿದಂತೆ, ಗದಗ ಜಿಲ್ಲೆಯ ಜಿಲ್ಲಾ ಆಯುಷ್ ಕಛೇರಿಯಲ್ಲಿ, ಔಷಧಿ ಮತ್ತು ಸಾಧನೋಪಕರಣಗಳ ಖರೀದಿಯ ಬಗ್ಗೆ ಸರಬರಾಜು ಮಾಡಿರುವ ಕಂಪನಿಗಳೊಂದಿಗೆ ಕಮಿಷನ್ ಹಣಕ್ಕೆ ಬೇಡಿಕೆ ಇಟ್ಟಿರುವ ಬಗ್ಗೆ What's app ಮೂಲಕ Audio Recording ನೊಂದಿಗೆ ದೂರು ಸ್ವೀಕೃತವಾಗಿರುತ್ತದೆ. ಅಲ್ಲದೇ, ಸದರಿ ಜಿಲ್ಲಾ ಆಯುಷ್ ಅಧಿಕಾರಿಗಳು ಕಮಿಷನ್ ಹಣಕ್ಕೆ ಬೇಡಿಕೆ ಇಟ್ಟಿರುವ ಬಗ್ಗೆ, ದಿನಪತ್ರಿಕೆ ಹಾಗೂ ಟಿ.ವಿ ಮಾಧ್ಯಮಗಳಲ್ಲಿಯೂ ಪ್ರಸಾರಗೊಂಡಿರುವ ಬಗ್ಗೆ ವರದಿಯಾಗಿರುತ್ತದೆ. ಈ ವರದಿಯಲ್ಲಿ ರಾಜ್ಯದ ಬಹುತೇಕ ಜಿಲ್ಲಾ ಆಯುಷ್ ಕಛೇರಿಗಳಲ್ಲಿ ನಡೆಯುವ ಖರೀದಿ ಪ್ರಕ್ರಿಯೆಗಳಲ್ಲಿ ಕಮಿಷನ್ ದಂಧೆ ನಡೆಯುತ್ತಿರುವುದಾಗಿ, ಆರೋಪಗಳು ಕೇಳಿಬಂದಿರುತ್ತದೆ.

What's app ಮೂಲಕ ಸ್ವೀಕೃತವಾದ Audio Recording ನ್ನು ಪರಿಶೀಲಿಸಲಾಗಿ, ಗದಗ ಜಿಲ್ಲೆಯ ಜಿಲ್ಲಾ ಆಯುಷ್ ಅಧಿಕಾರಿಗಳಾದ ಡಾ. ಜಯಪಾಲ್ ಸಿಂಗ್ ರವರು ಔಷಧ ಸರಬರಾಜು ಕಂಪನಿಯಾದ M/S ಭೂಷನ್ ಫರ್ಮಾಸುಟಿಕಲ್ ಪ್ರೈವೇಟ್ ಲಿಮಿಟೆಡ್ ಇದರ ವ್ಯವಸ್ಥಾಪಕರಾದ ಶ್ರೀ ರಾಜೀವ ಕುಮಾರ ರವರಿಗೆ, ಔಷಧ ಖರೀದಿಯ ಒಟ್ಟು ಮೊತ್ತದ 25% ನಿಂದ 30% ವರೆಗೆ ಕಮಿಷನ್ ನೀಡಬೇಕೆಂದು, ಮತ್ತು ಕಮಿಷನ್ ಹಣದಲ್ಲಿ ಕಛೇರಿಯ ಸಿಬ್ಬಂದಿ, ಜಿಲ್ಲಾಪಂಚಾಯತ್, Testing lab, ಇನ್ನೂ ಇತರರಿಗೆ ಹಂಚಬೇಕು ಎಂದು ಬೇಡಿಕೆ ಇಟ್ಟಿರುವುದು ಕಂಡುಬಂದಿರುತ್ತದೆ ಹಾಗೂ ಈ ಬೇಡಿಕೆಗೆ ಪ್ರತಿಕ್ರಿಯಿಸಿರುವ ಸದರಿ ಔಷಧ ಸರಬರಾಜು ಕಂಪನಿಯ ವ್ಯವಸ್ಥಾಪಕರು ನೀವು ತುಂಬಾ ಜಾಸ್ತಿ ಕೇಳುತ್ತಿದ್ದಿರಿ ಬೇರೆ ಎಲ್ಲಾ ಜಿಲ್ಲೆ ಗಳಿಗೆ 15% ಮಾತ್ರ ಕೊಟ್ಟಿರುತ್ತವೆ. ಈ ಹಿಂದೆ ಸಂಪೂರ್ಣ ಔಷಧಿ ಮತ್ತು ಸಾಧನೋಪಕರಣಗಳಆರ್ಡರ್ ಗಳು ನಮಗೆ ಸಿಗುತ್ತಿತ್ತು ಆಗ ನಮ್ಮ ಕಂಪನಿಯಿಂದ 25% ನಿಂದ 30% ಕಮಿಷನ ಕೊಟ್ಟಿರುತ್ತವೆ." ಮುಂದುವರೆದು, ಸದರಿ ಔಷಧ ಸರಬರಾಜು ಕಂಪನಿಯ ವ್ಯವಸ್ಥಾಪಕರು "ಬಾಗಲಕೋಟೆ, ಕೊಪ್ಪಳ, ಕಾರವಾರ, ಹಾಸನ, ಶಿವಮೊಗ್ಗ ಎಲ್ಲಾ ಕಡೆ ಔಷಧಿಗಳನ್ನು ಸರಬರಾಜು ಮಾಡಿದ್ದಿವಿ ಇವರೆಲ್ಲಾ ಟೆಂಡರ್ ಪ್ರಕ್ರಿಯೆಯಲ್ಲಿ ನಮಗೆ ತುಂಬಾ ಸಹಕರಿಸಿರುತ್ತಾರೆ. ಅಲ್ಲದೆ, ಕಾರವಾರ ನಲ್ಲಿರುವ ಡಾ.ಲಲಿತಾ ಶೆಟ್ಟಿರವರು ಸಹ, ಅವರ ಪತಿಯವರ ಸ್ವಂತ ಫಾರ್ಮಸಿ (ರೆವೆಂಟೋ ಫಾರ್ಮಸಿ) ಇದ್ದರೂ ಸಹ, ಎಲ್ಲಾ ಆರ್ಡರ್ ನಮ್ಮ ಕಂಪನಿಗೆ ನೀಡುತ್ತಾರೆ" ಎಂದು ಹೇಳಿರುವುದು ಕಂಡುಬರುತ್ತದೆ. ಹಾಸನ ಮತ್ತು ಬಳ್ಳಾರಿ ಜಿಲ್ಲಾ ಆಯುಷ್ ಕಛೇರಿಯವರು 1.10 ಲಕ್ಷ ಬೆಲೆ ಬಾಳುವ ಪಂಚಕರ್ಮ ಟೇಬಲ್ ನ್ನು 4.85 ಲಕ್ಷಕೊಟ್ಟು ಖರೀದಿ ಮಾಡಿರುವ ಬಗ್ಗೆಯೂ ಸಹ ಸಂಭಾಷಣೆ ನಡೆದಿರುತ್ತದೆ.

ಮೇಲ್ಕಂಡ ಸಂಭಾಷಣೆಯಲ್ಲಿನ ಅಂಶಗಳನ್ನು ಗಮನಿಸಿದಾಗ, ಡಾ. ಜಯಪಾಲ್ ಸಿಂಗ್ , ಜಿಲ್ಲಾ ಆಯುಷ್ ಅಧಿಕಾರಿಗಳು, ಗದಗ ಇವರು ಕಮಿಷನ್ ಹಣಕ್ಕಾಗಿ, ಔಷಧಿ ಸರಬರಾಜು ಕಂಪನಿಗೆ ಬೇಡಿಕೆಯಿಟ್ಟಿರುವುದು ಹಾಗೂ ಈ ಕಾರ್ಯಕ್ಕೆ ಗದಗ ಜಿಲ್ಲಾ ಆಯುಷ್ ಕಛೇರಿಯ

ಸಿಬ್ಬಂದಿಗಳಾದ ಶ್ರೀ ಕಿರಣ ಕುಮಾರ ಬಿ., ದ್ವಿತೀಯ ದರ್ಜೆ ಸಹಾಯಕರು, ಹಾಗೂ ಶ್ರೀ ಕಲ್ಲೇಶ ಸ್ವಾಮಿ, ಕಛೇರಿ ಅಧೀಕ್ಷಕರು ಇವರುಗಳ ಸಹಾಯ ಪಡೆದುಕೊಂಡಿರುವುದು ರೆಕಾರ್ಡಿಂಗನಲ್ಲಿ ಕೇಳಿಬಂದಿರುತ್ತದೆ.

ಆದ್ದರಿಂದ, ಕೆಳಕಂಡ ಅಧಿಕಾರಿ/ನೌಕರರಿಗೆ ನಿರ್ದೇಶನಾಲಯದ ಪತ್ರ ಸಂಖ್ಯೆ:AYUSH/69/EST7/2025, ದಿನಾಂಕ:17-12-2025ರಲ್ಲಿ ಕಾರಣ ಕೇಳುವ ನೋಟಿಸ್ ಜಾರಿ ಮಾಡಿ, ಸದರಿ ಆರೋಪಗಳ ಬಗ್ಗೆ ಲಿಖಿತ ಹೇಳಿಕೆಯನ್ನು ದಿನಾಂಕ:22-12-2025 ರಂದು ಇ-ಮೇಲ್ ಮೂಲಕ ಸಲ್ಲಿಸಿದ್ದು, ಸದರಿ ಸಮಜಾಷಿಯಲ್ಲಿ ತಮ್ಮ ಮೇಲಿನ ಆರೋಪಗಳನ್ನು ನಿರಾಕರಿಸಿದ್ದು, ಸದರಿಯವರುಗಳ ಸಮಜಾಯಿಷಿಯನ್ನು ಒಪ್ಪಲು ಸಾಧ್ಯವಿರುವುದಿಲ್ಲವೆಂದು ಅಭಿಪ್ರಾಯಿಸಲಾಗಿರುತ್ತದೆ.

1. ಡಾ. ಜಯಪಾಲ್ ಸಿಂಗ್ ಸಮೋರೆಕರ್, ಜಿಲ್ಲಾ ಆಯುಷ್ ಅಧಿಕಾರಿಗಳು, ಗದಗ ಜಿಲ್ಲೆ.
2. ಶ್ರೀ ಕಲ್ಲೇಶ್ ಸ್ವಾಮಿ, ಕಛೇರಿ ಅಧೀಕ್ಷಕರು, ಜಿಲ್ಲಾ ಆಯುಷ್ ಕಛೇರಿ,ಗದಗ ಜಿಲ್ಲೆ
3. ಶ್ರೀ ಕಿರಣ ಕುಮಾರ ಬಿ., ದ್ವಿತೀಯ ದರ್ಜೆ ಸಹಾಯಕರು, ಜಿಲ್ಲಾ ಆಯುಷ್ ಕಛೇರಿ ಗದಗ ಜಿಲ್ಲೆ.

ಡಾ.ಜಯಪಾಲ ಸಿಂಗ್, ಜಿಲ್ಲಾ ಆಯುಷ್ ಅಧಿಕಾರಿಗಳು ಗದಗ ಜಿಲ್ಲೆ, ಶ್ರೀ ಕಲ್ಲೇಶ್, ಕಛೇರಿ ಅಧೀಕ್ಷಕರು, ಜಿಲ್ಲಾ ಆಯುಷ್ ಕಛೇರಿ ಗದಗ ಜಿಲ್ಲೆ ಮತ್ತು ಶ್ರೀ ಕಿರಣ ಕುಮಾರ ಬಿ. ದ್ವಿತೀಯ ದರ್ಜೆ ಸಹಾಯಕರು., ಜಿಲ್ಲಾ ಆಯುಷ್ ಕಛೇರಿ ಗದಗ ಜಿಲ್ಲೆ ಇವರುಗಳನ್ನು ಅಮಾನತ್ತು ಮಾಡಿ, ಲೋಕಾಯುಕ್ತ ತನಿಖೆಗೆ ವಹಿಸುವಂತೆ ಕೋರಿರುತ್ತಾರೆ.

ಆಯುಕ್ತರು, ಆಯುಷ್ ಇಲಾಖೆ ಇವರ ಪ್ರಸ್ತಾವನೆ ಹಾಗೂ ಲಭ್ಯವಿರುವ ದಾಖಲೆಗಳನ್ನು ಪರಿಶೀಲಿಸಿ, ಔಷಧಿಗಳ ಮತ್ತು ಉಪಕರಣಗಳ ಖರೀದಿಯಲ್ಲಿ ಅಕ್ರಮ ಹಾಗೂ ಕರ್ತವ್ಯ ಲೋಪವೆಸಗಿ ಭ್ರಷ್ಟಚಾರ ನಡೆಸಿರುವುದು ಮೇಲ್ನೋಟಕ್ಕೆ ಕಂಡುಬಂದಿರುವ ಹಿನ್ನೆಲೆಯಲ್ಲಿ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ ಸರ್ಕಾರವು ಕರ್ತವ್ಯಲೋಪವೆಸಗಿರುವ ಅಧಿಕಾರಿ/ಸಿಬ್ಬಂದಿಗಳನ್ನು ಇಲಾಖಾ ವಿಚಾರಣೆ ಬಾಕಿ ಇರಿಸಿ, ಸೇವೆಯಿಂದ ಅಮನತ್ತುಗೊಳಿಸಲು ತೀರ್ಮಾನಿಸಿ, ಈ ಕೆಳಕಂಡ ಆದೇಶ.

**<u>ಸರ್ಕಾರದ ಆದೇಶ ಸಂಖ್ಯೆ: ಆಕುಕ 477 ಪಿಐಎಂ 2025, ಬೆಂಗಳೂರು, ದಿನಾಂಕ:29.01.2026</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಗದಗ ಜಿಲ್ಲೆಯ ಜಿಲ್ಲಾ ಆಯುಷ್ ಕಛೇರಿಯಲ್ಲಿ, ಔಷಧಿ ಮತ್ತು ಸಾಧನೋಪಕರಣಗಳ ಖರೀದಿಯ ಬಗ್ಗೆ, ಸರಬರಾಜು ಮಾಡಿರುವ ಕಂಪನಿಗಳೊಂದಿಗೆ ಕಮಿಷನ್ ಹಣಕ್ಕೆ ಬೇಡಿಕೆ ಇಟ್ಟಿರುವ ವಿಷಯಕ್ಕೆ ಸಂಬಂಧಿಸಿದಂತೆ ಅಕ್ರಮ, ಭ್ರಷ್ಟಚಾರ ಹಾಗೂ ಕರ್ತವ್ಯ ಲೋಪದ ಆರೋಪಗಳ ಕುರಿತಂತೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮ-1957 ರ ನಿಯಮ – 10 (1) (ಡಿ) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕೆಳಕಂಡ ಅಧಿಕಾರಿ / ಸಿಬ್ಬಂದಿಗಳ ವಿರುದ್ಧ ಶಿಸ್ತು ಕ್ರಮ ಬಾಕಿಯಿರಿಸಿ, ತಕ್ಷಣದಿಂದ ಜಾರಿಗೆ ಬರುವಂತೆ ಸದರಿಯವರುಗಳನ್ನು ಸೇವೆಯಿಂದ ಅಮಾನತ್ತುಗೊಳಿಸಿ ಆದೇಶಿಸಿದೆ.

1. ಡಾ. ಜಯಪಾಲ್ ಸಿಂಗ್ ಸಮೋರೆಕರ್, ಜಿಲ್ಲಾ ಆಯುಷ್ ಅಧಿಕಾರಿಗಳು, ಗದಗ ಜಿಲ್ಲೆ.
2. ಶ್ರೀ ಕಲ್ಲೇಶ್ ಸ್ವಾಮಿ, ಕಛೇರಿ ಅಧೀಕ್ಷಕರು, ಜಿಲ್ಲಾ ಆಯುಷ್ ಕಛೇರಿ ಗದಗ ಜಿಲ್ಲೆ
3. ಶ್ರೀ ಕಿರಣ ಕುಮಾರ ಬಿ., ದ್ವಿತೀಯ ದರ್ಜೆ ಸಹಾಯಕರು. ಜಿಲ್ಲಾ ಆಯುಷ್ ಕಛೇರಿ ಗದಗ ಜಿಲ್ಲೆ.

ಸದರಿ ಅಧಿಕಾರಿ / ಸಿಬ್ಬಂದಿಗಳು ಅಮಾನತ್ತಿನ ಅವಧಿಯಲ್ಲಿ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 98 ರನ್ವಯ ನಿಯಮಾನುಸಾರ ಜೀವನಾಂಶ ಭತ್ಯೆ ಪಡೆಯಲು ಅರ್ಹರಾಗಿರುತ್ತಾರೆ ಮತ್ತು ಅಮಾನತ್ತಿನ ಅವಧಿಯಲ್ಲಿ ಸಕ್ಷಮ ಪ್ರಾಧಿಕಾರದ ಅನುಮತಿ ಪಡೆಯದೇ ಕೇಂದ್ರ ಸ್ಥಾನವನ್ನು ಬಿಡತಕ್ಕದ್ದಲ್ಲ.

ಮುಂದುವರೆದು, ಸದರಿ ಅಧಿಕಾರಿ / ಸಿಬ್ಬಂದಿಗಳ ಲೀನ್ ಶಿಫ್ಟ್ ಮಾಡುವ ಬಗ್ಗೆ ಸೂಕ್ತ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ ಆಯುಕ್ತರು ಆಯುಷ್ ಇಲಾಖೆ ಇವರಿಗೆ ಸೂಚಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಶ್ರೀಪತಿ ವಿ.ಕೆ.)
ಸರ್ಕಾರದ ಅಧೀನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ಭಾಮ್ಯೆಪ ಮತ್ತು ಸಮನ್ವಯ)

**ಇವರಿಗೆ:-**

1. ಪ್ರಧಾನ ಮಹಾಲೇಖಪಾಲರು (ಜಿ&ಎಸ್‌ಎಸ್‌ಎ) /(ಇ&ಆರ್‌ಎಸ್‌ಎ), ಕರ್ನಾಟಕ ಹೊಸಕಟ್ಟ, 'ಆಡಿಟ್ ಭವನ', ಅಂಚೆಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು-560 001.
2. ಪ್ರಧಾನ ಮಹಾಲೇಖಪಾಲರು (ಎ&ಇ), ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ: 5329, ಬೆಂಗಳೂರು-560 001
3. ಆಯುಕ್ತರು, ಆಯುಷ್ ಇಲಾಖೆ, ಧನ್ವಂತರಿ ರಸ್ತೆ, ಬೆಂಗಳೂರು.
4. ಸಂಬಂಧಪಟ್ಟ ಅಧಿಕಾರಿ / ಸಿಬ್ಬಂದಿಗಳಿಗೆ (ಆಯುಷ್ ಆಯುಕ್ತರ ಮುಖಾಂತರ)
5. ಶಾಖಾ ರಕ್ಷಾ ಕಡತ /ಹೆಚ್ಚುವರಿ ಪ್ರತಿ.

ಪ್ರತಿ ಮಾಹಿತಿಗಾಗಿ:-

1. ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಕಾಸಸೌಧ, ಬೆಂಗಳೂರು.
2. ಸರ್ಕಾರ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸಸೌಧ, ಬೆಂಗಳೂರು.
3. ಸರ್ಕಾರ ಅಪರ ಕಾರ್ಯದರ್ಶಿ ರವರ ಆಪ್ತ ಸಹಾಯಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸಸೌಧ, ಬೆಂಗಳೂರು.

ಅನುಬಂಧ - 5

**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:** ಗದಗ ಜಿಲ್ಲೆಯ ಜಿಲ್ಲಾ ಆಯುಷ್ ಕಛೇರಿಯಲ್ಲಿ, ಔಷಧಿ ಮತ್ತು ಸಾಧನೋಪಕರಣಗಳ ಖರೀದಿಯಲ್ಲಿ ಅವ್ಯವಹಾರಕ್ಕೆ ಸಂಬಂಧಿಸಿದಂತೆ ಪ್ರಕರಣವನ್ನು ತನಿಖೆಗಾಗಿ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ – 7 (2-ಎ) ರನ್ವಯ ಕರ್ನಾಟಕ ಲೋಕಾಯುಕ್ತರಿಗೆ ವಹಿಸುವ ಬಗ್ಗೆ.

**ಓದಲಾಗಿದೆ:** ಆಯುಷ್ ಇಲಾಖೆ ಇವರ ಏಕಕಡತ ಸಂಖ್ಯೆ: AYUSH/69/EST7/2025-AEST-DIRECTORATE OF AYUSH (1999827)

**ಪ್ರಸ್ತಾವನೆ:**

ಮೇಲೆ ಓದಲಾದ ಆಯುಕ್ತರು, ಆಯುಷ್ ಇಲಾಖೆ ಇವರ ಏಕಕಡತದಲ್ಲಿ, ಆಯುಷ್ ಇಲಾಖೆಯ, ಜಿಲ್ಲಾ ಆಯುಷ್ ಕಛೇರಿಗಳಲ್ಲಿ ಜಿಲ್ಲಾ ಪಂಚಾಯತ ಅನುದಾನದಲ್ಲಿ ನಿರ್ವಹಿಸಲಾಗುವ ಖರೀದಿ ಪ್ರಕ್ರಿಯೆಗೆ ಸಂಬಂಧಿಸಿದಂತೆ, ಗದಗ ಜಿಲ್ಲೆಯ ಜಿಲ್ಲಾ ಆಯುಷ್ ಕಛೇರಿಯಲ್ಲಿ, ಔಷಧಿ ಮತ್ತು ಸಾಧನೋಪಕರಣಗಳ ಖರೀದಿಯ ಬಗ್ಗೆ, ಸರಬರಾಜು ಮಾಡಿರುವ ಕಂಪನಿಗಳೊಂದಿಗೆ ಕಮಿಷನ್ ಹಣಕ್ಕೆ ಬೇಡಿಕೆ ಇಟ್ಟಿರುವ ಬಗ್ಗೆ, What's app ಮೂಲಕ Audio Recording ನೊಂದಿಗೆ ದೂರು ಸ್ವೀಕೃತವಾಗಿರುತ್ತದೆ. ಅಲ್ಲದೇ, ಸದರಿ ಜಿಲ್ಲಾ ಆಯುಷ್ ಅಧಿಕಾರಿಗಳು ಕಮಿಷನ್ ಹಣಕ್ಕೆ ಬೇಡಿಕೆ ಇಟ್ಟಿರುವ ಬಗ್ಗೆ, ದಿನಪತ್ರಿಕೆ ಹಾಗೂ ಟಿ.ವಿ ಮಾಧ್ಯಮಗಳಲ್ಲಿಯೂ ಪ್ರಸಾರಗೊಂಡಿರುವ ಬಗ್ಗೆ ವರದಿಯಾಗಿರುತ್ತದೆ. ಈ ವರದಿಯಲ್ಲಿ ರಾಜ್ಯದ ಬಹುತೇಕ ಜಿಲ್ಲಾ ಆಯುಷ್ ಕಛೇರಿಗಳಲ್ಲಿ ನಡೆಯುವ ಖರೀದಿ ಪ್ರಕ್ರಿಯೆಗಳಲ್ಲಿ ಕಮಿಷನ್ ದಂಧೆ ನಡೆಯುತ್ತಿರುವುದಾಗಿ, ಆರೋಪಗಳು ಕೇಳಿಬಂದಿರುತ್ತದೆ.

What's app ಮೂಲಕ ಸ್ವೀಕೃತವಾದ Audio Recording ನ್ನು ಪರಿಶೀಲಿಸಲಾಗಿ, ಗದಗ ಜಿಲ್ಲೆಯ ಜಿಲ್ಲಾ ಆಯುಷ್ ಅಧಿಕಾರಿಗಳಾದ ಡಾ. ಜಯಪಾಲ್ ಸಿಂಗ್ ರವರು ಔಷಧ ಸರಬರಾಜು ಕಂಪನಿಯಾದ M/S ಭೂಷನ್ ಫರ್ಮಾಸುಟಿಕಲ್ ಪ್ರೈವೇಟ್ ಲಿಮಿಟೆಡ್ ಇದರ ವ್ಯವಸ್ಥಾಪಕರಾದ ಶ್ರೀ ರಾಜೀವ ಕುಮಾರ ರವರಿಗೆ, ಔಷಧ ಖರೀದಿಯ ಒಟ್ಟು ಮೊತ್ತದ 25% ನಿಂದ 30% ವರೆಗೆ ಕಮಿಷನ್ ನೀಡಬೇಕೆಂದು, ಮತ್ತು ಕಮಿಷನ್ ಹಣದಲ್ಲಿ ಕಛೇರಿಯ ಸಿಬ್ಬಂದಿ, ಜಿಲ್ಲಾಪಂಚಾಯತ್, Testing lab, ಇನ್ನೂ ಇತರರಿಗೆ ಹಂಚಬೇಕು ಎಂದು ಬೇಡಿಕೆ ಇಟ್ಟಿರುವುದು ಕಂಡುಬಂದಿರುತ್ತದೆ ಹಾಗೂ ಈ ಬೇಡಿಕೆಗೆ ಪ್ರತಿಕ್ರಿಯಿಸಿರುವ ಸದರಿ ಔಷಧ ಸರಬರಾಜು ಕಂಪನಿಯ ವ್ಯವಸ್ಥಾಪಕರು ನೀವು ತುಂಬಾ ಜಾಸ್ತಿ ಕೇಳುತ್ತಿದ್ದೀರಿ ಬೇರೆ ಎಲ್ಲಾ ಜಿಲ್ಲೆ ಗಳಿಗೆ 15% ಮಾತ್ರ ಕೊಟ್ಟಿರುತ್ತವೆ. ಈ ಹಿಂದೆ ಸಂಪೂರ್ಣ ಔಷಧಿ ಮತ್ತು ಸಾಧನೋಪಕರಣಗಳಆರ್ಡರ್ ಗಳು ನಮಗೆ ಸಿಗುತ್ತಿತ್ತು ಆಗ ನಮ್ಮ ಕಂಪನಿಯಿಂದ 25% ನಿಂದ 30% ಕಮಿಷನ ಕೊಟ್ಟಿರುತ್ತವೆ." ಮುಂದುವರೆದು, ಸದರಿ ಔಷಧ ಸರಬರಾಜು ಕಂಪನಿಯ ವ್ಯವಸ್ಥಾಪಕರು "ಬಾಗಲಕೋಟೆ, ಕೊಪ್ಪಳ, ಕಾರವಾರ, ಹಾಸನ, ಶಿವಮೊಗ್ಗ ಎಲ್ಲಾ ಕಡೆ ಔಷಧಿಗಳನ್ನು ಸರಬರಾಜು ಮಾಡಿದ್ದೀವಿ ಇವರೆಲ್ಲಾ ಟೆಂಡರ್ ಪ್ರಕ್ರಿಯೆಯಲ್ಲಿ ನಮಗೆ ತುಂಬಾ ಸಹಕರಿಸಿರುತ್ತಾರೆ. ಅಲ್ಲದೆ, ಕಾರವಾರ ನಲ್ಲಿರುವ ಡಾ.ಲಲಿತಾ ಶೆಟ್ಟಿರವರು ಸಹ, ಅವರ ಪತಿಯವರ ಸ್ವಂತ ಫಾರ್ಮಸಿ (ರವೆಂಟೋ ಫಾರ್ಮಸಿ) ಇದ್ದರೂ ಸಹ, ಎಲ್ಲಾ ಆರ್ಡರ್ ನಮ್ಮ ಕಂಪನಿಗೆ ನೀಡುತ್ತಾರೆ" ಎಂದು ಹೇಳಿರುವುದು ಕಂಡುಬರುತ್ತದೆ. ಹಾಸನ ಮತ್ತು ಬಳ್ಳಾರಿ ಜಿಲ್ಲಾ ಆಯುಷ್ ಕಛೇರಿಯವರು 1.10 ಲಕ್ಷ ಬೆಲೆ ಬಾಳುವ ಪಂಚಕರ್ಮ ಟೇಬಲ್ ನ್ನು 4.85 ಲಕ್ಷಕೊಟ್ಟು ಖರೀದಿ ಮಾಡಿರುವ ಬಗ್ಗೆಯೂ ಸಹ ಸಂಭಾಷಣೆ ನಡೆದಿರುತ್ತದೆ.

ಮೇಲ್ಕಂಡ ಸಂಭಾಷಣೆಯಲ್ಲಿನ ಅಂಶಗಳನ್ನು ಗಮನಿಸಿದಾಗ, ಡಾ. ಜಯಪಾಲ್ ಸಿಂಗ್, ಜಿಲ್ಲಾ ಆಯುಷ್ ಅಧಿಕಾರಿಗಳು, ಗದಗ ಇವರು ಕಮಿಷನ್ ಹಣಕ್ಕಾಗಿ, ಔಷಧಿ ಸರಬರಾಜು ಕಂಪನಿಗೆ ಬೇಡಿಕೆಯಿಟ್ಟಿರುವುದು ಹಾಗೂ ಈ ಕಾರ್ಯಕ್ಕೆ ಗದಗ ಜಿಲ್ಲಾ ಆಯುಷ್ ಕಛೇರಿಯ ಸಿಬ್ಬಂದಿಗಳಾದ ಶ್ರೀ ಕಿರಣ ಕುಮಾರ ಬಿ., ದ್ವಿತೀಯ ದರ್ಜೆ ಸಹಾಯಕರು, ಹಾಗೂ ಶ್ರೀ ಕಲ್ಲೇಶ ಸ್ವಾಮಿ, ಕಛೇರಿ ಅಧೀಕ್ಷಕರು ಇವರುಗಳ ಸಹಾಯ ಪಡೆದುಕೊಂಡಿರುವುದು ರೆಕಾರ್ಡಿಂಗನಲ್ಲಿ ಕೇಳಿಬಂದಿರುತ್ತದೆ.

ಆದ್ದರಿಂದ, ಕೆಳಕಂಡ ಅಧಿಕಾರಿ/ನೌಕರರಿಗೆ ನಿರ್ದೇಶನಾಲಯದ ಪತ್ರ ಸಂಖ್ಯೆ:AYUSH/69/EST7/2025, ದಿನಾಂಕ:17-12-2025ರಲ್ಲಿ ಕಾರಣ ಕೇಳುವ ನೋಟಿಸ್ ಜಾರಿ ಮಾಡಿ, ಸದರಿ ಆರೋಪಗಳ ಬಗ್ಗೆ ಲಿಖಿತ ಹೇಳಿಕೆಯನ್ನು ದಿನಾಂಕ:22-12-2025 ರಂದು ಇ-ಮೇಲ್ ಮೂಲಕ ಸಲ್ಲಿಸಿದ್ದು, ಸದರಿ ಸಮಜಾಯಿಷಿಯಲ್ಲಿ ತಮ್ಮ ಮೇಲಿನ ಆರೋಪಗಳನ್ನು ನಿರಾಕರಿಸಿದ್ದು, ಸದರಿಯವರುಗಳ ಸಮಜಾಯಿಷಿಯನ್ನು ಒಪ್ಪಲು ಸಾಧ್ಯವಿರುವುದಿಲ್ಲವೆಂದು ಅಭಿಪ್ರಾಯಿಸಲಾಗಿರುತ್ತದೆ.

1. ಡಾ. ಜಯಪಾಲ್ ಸಿಂಗ್ ಸಮೋರೇಕರ್, ಜಿಲ್ಲಾ ಆಯುಷ್ ಅಧಿಕಾರಿಗಳು, ಗದಗ ಜಿಲ್ಲೆ.
2. ಶ್ರೀ ಕಲ್ಲೇಶ್ ಸ್ವಾಮಿ, ಕಛೇರಿ ಅಧೀಕ್ಷಕರು, ಜಿಲ್ಲಾ ಆಯುಷ್ ಕಛೇರಿ,ಗದಗ ಜಿಲ್ಲೆ
3. ಶ್ರೀ ಕಿರಣ ಕುಮಾರ ಬಿ., ದ್ವಿತೀಯ ದರ್ಜೆ ಸಹಾಯಕರು, ಜಿಲ್ಲಾ ಆಯುಷ್ ಕಛೇರಿ ಗದಗ ಜಿಲ್ಲೆ.

ಡಾ.ಜಯಪಾಲ ಸಿಂಗ್, ಜಿಲ್ಲಾ ಆಯುಷ್ ಅಧಿಕಾರಿಗಳು ಗದಗ ಜಿಲ್ಲೆ, ಶ್ರೀ ಕಲ್ಲೇಶ್, ಕಛೇರಿ ಅಧೀಕ್ಷಕರು, ಜಿಲ್ಲಾ ಆಯುಷ್ ಕಛೇರಿ ಗದಗ ಜಿಲ್ಲೆ ಮತ್ತು ಶ್ರೀ ಕಿರಣ ಕುಮಾರ ಬಿ. ದ್ವಿತೀಯ ದರ್ಜೆ ಸಹಾಯಕರು., ಜಿಲ್ಲಾ ಆಯುಷ್ ಕಛೇರಿ ಗದಗ ಜಿಲ್ಲೆ ಇವರುಗಳನ್ನು ಅಮಾನತ್ತು ಮಾಡಿ, ಲೋಕಾಯುಕ್ತ ತನಿಖೆಗೆ ವಹಿಸುವಂತೆ ಆಯುಷ್ ಆಯುಕ್ತರು ಕೋರಿರುತ್ತಾರೆ.

ಆಯುಕ್ತರು, ಆಯುಷ್ ಇಲಾಖೆ ಇವರ ಪ್ರಸ್ತಾವನೆ ಹಾಗೂ ಲಭ್ಯವಿರುವ ದಾಖಲೆಗಳನ್ನು ಪರಿಶೀಲಿಸಿ, ಔಷಧಿಗಳ ಮತ್ತು ಉಪಕರಣಗಳ ಖರೀದಿಯಲ್ಲಿ ಅಕ್ರಮ ಹಾಗೂ ಕರ್ತವ್ಯ ಲೋಪವೆಸಗಿ ಭ್ರಷ್ಟಚಾರ ನಡೆಸಿರುವುದು ಮೇಲ್ನೋಟಕ್ಕೆ ಕಂಡುಬಂದಿರುವ ಹಿನ್ನಲೆಯಲ್ಲಿ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ ಸರ್ಕಾರವು ಅಕ್ರಮ ಹಾಗೂ ಕರ್ತವ್ಯ ಲೋಪವೆಸಗಿರುವ ಬಗ್ಗೆ ತನಿಖೆ ನಡೆಸಲು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ – 7 (2-ಎ) ರನ್ವಯ ಮಾನ್ಯ ಲೋಕಾಯುಕ್ತರಿಗೆ ವಹಿಸಲು ತೀರ್ಮಾನಿಸಿ, ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಆಕುಕ 477 ಪಿಐಎಂ 2025, ಬೆಂಗಳೂರು,**
**ದಿನಾಂಕ:29.01.2026**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಗದಗ ಜಿಲ್ಲೆಯ ಜಿಲ್ಲಾ ಆಯುಷ್ ಕಛೇರಿಯಲ್ಲಿ, ಔಷಧಿ ಮತ್ತು ಸಾಧನೋಪಕರಣಗಳ ಖರೀದಿಯ ಬಗ್ಗೆ ಸರಬರಾಜು ಮಾಡಿರುವ ಕಂಪನಿಗಳೊಂದಿಗೆ ಕಮಿಷನ್ ಹಣಕ್ಕೆ ಬೇಡಿಕೆ ಇಟ್ಟಿರುವ ವಿಷಯಕ್ಕೆ ಸಂಬಂಧಿಸಿದಂತೆ ಕೆಳಕಂಡ ಅಧಿಕಾರಿ/ಸಿಬ್ಬಂದಿಗಳ ವಿರುದ್ಧ ತನಿಖೆ ನಡೆಸಲು ಪ್ರಕರಣವನ್ನು ಕರ್ನಾಟಕ ಲೋಕಾಯುಕ್ತ ಕಾಯ್ದೆ-1984ರ ಕಲಂ7(2-ಎ)ರನ್ವಯ ಮಾನ್ಯ ಲೋಕಾಯುಕ್ತರ ತನಿಖೆಗೆ ವಹಿಸಿ ಆದೇಶಿಸಿದೆ.

1. ಡಾ. ಜಯಪಾಲ್ ಸಿಂಗ್ ಸಮೋರೇಕರ್, ಜಿಲ್ಲಾ ಆಯುಷ್ ಅಧಿಕಾರಿಗಳು, ಗದಗ ಜಿಲ್ಲೆ.
2. ಶ್ರೀ ಕಲ್ಲೇಶ್ ಸ್ವಾಮಿ, ಕಛೇರಿ ಅಧೀಕ್ಷಕರು, ಜಿಲ್ಲಾ ಆಯುಷ್ ಕಛೇರಿ ಗದಗ ಜಿಲ್ಲೆ

3. ಶ್ರೀ ಕಿರಣ ಕುಮಾರ ಬಿ., ದ್ವಿತೀಯ ದರ್ಜೆ ಸಹಾಯಕರು, ಜಿಲ್ಲಾ ಆಯುಷ್ ಕಛೇರಿ ಗದಗ ಜಿಲ್ಲೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಶ್ರೀಪತಿ ವಿ.ಕೆ.)
ಸರ್ಕಾರದ ಅಧೀನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ಭಾಮ್ವೈಪ ಮತ್ತು ಸಮನ್ವಯ)

2/2/26

**ಇವರಿಗೆ:-**

1. ಪ್ರಧಾನ ಮಹಾಲೇಖಪಾಲರು,(ಲೆಕ್ಕ ಪತ್ರ ವಿಭಾಗ) ಕರ್ನಾಟಕ ವೃತ್ತ, ಬೆಂಗಳೂರು.
2. ಮಾನ್ಯ ಲೋಕಾಯುಕ್ತರು, ಕರ್ನಾಟಕ ಬಹುಮಹಡಿ ಕಟ್ಟಡ, ಬೆಂಗಳೂರು
3. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬಹುಮಹಡಿ ಕಟ್ಟಡ, ಬೆಂಗಳೂರು (ಪ್ರಕರಣಕ್ಕೆ ಸಂಬಂಧಿಸಿದ ದಾಖಲೆಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಲಾಗಿದೆ)
4. ಆಯುಕ್ತರು, ಆಯುಷ್ ಇಲಾಖೆ, ಧನ್ವಂತರಿ ರಸ್ತೆ, ಬೆಂಗಳೂರು.
5. ಶಾಖಾ ರಕ್ಷಾ ಕಡತ /ಹೆಚ್ಚುವರಿ ಪ್ರತಿ.

ಪ್ರತಿ ಮಾಹಿತಿಗಾಗಿ:-

1. ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಕಾಸಸೌಧ, ಬೆಂಗಳೂರು.
2. ಸರ್ಕಾರ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸಸೌಧ, ಬೆಂಗಳೂರು.
3. ಸರ್ಕಾರ ಅಪರ ಕಾರ್ಯದರ್ಶಿ ರವರ ಆಪ್ತ ಸಹಾಯಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸಸೌಧ, ಬೆಂಗಳೂರು.

EST 7
2/2/26

03/02/2020